ಯಾವುದಕ್ಕೂ ಬಗ್ಗುವುದಿಲ್ಲವೆಂದರೆ ನೀವು ನಮ್ಮ ರಕ್ಷಣೆಗೆ ಬರದಿದ್ದರೆ ಕಷ್ಟವಾಗುತ್ತದೆ. ನಾವು ನಿಮ್ಮ Ruling ಅನ್ನು ಪ್ರಶ್ನೆ ಮಾಡುವುದಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು) : ತಾವು Ruling ಕೊಟ್ಟಾಗಿದೆ.

SRI SIDDARAMAIAH : I am appealing to you. Please reconsider. ದಯವಿಟ್ಟು ಇದರ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಡಿ. Whatever required under the rule, ಸಹಿ ಮಾಡಿರುವ ಸದಸ್ಯರೆಲ್ಲರೂ ನಿಂತುಕೊಳ್ಳುತ್ತೇವೆ. ನಮಗೆ ಅವಕಾಶ ಮಾಡಿಕೊಡಿ. ನಾವು ಚರ್ಚೆ ಮಾಡುತ್ತೇವೆ.

ಅಧ್ಯಕ್ಷರು : ನಾನು ಇದರ ಬಗ್ಗೆ ನಂತರ ನಿರ್ಣಯ ಕೊಡುತ್ತೇನೆಂದು ಹೇಳಿದ್ದೇನೆ. I keep reserved regarding this Ruling.

ಶ್ರೀ ಸಿದ್ದರಾಮಯ್ಯ : ಈ ಸರ್ಕಾರ ಮೊಂಡ ಸರ್ಕಾರ, ಈ ಸರ್ಕಾರಕ್ಕೆ ಪ್ರಜಾಪ್ರಭುತ್ವದಲ್ಲೆ ನಂಬಿಕೆ ಇಲ್ಲ ಈ ಸರ್ಕಾರ ಪ್ರಜಾಪ್ರಭುತ್ವವನ್ನು ಹತ್ತಿಕ್ಕಲಿಕ್ಕೆ ಹೊರಟಿದೆ, ಈ ಸರ್ಕಾರದವರು ವಿರೋಧ ಪಕ್ಷದ ನಾಯಕರ ಹಕ್ಕುಗಳನ್ನು ಹತ್ತಿಕ್ಕಲಿಕ್ಕೆ ಕೊರಟಿದ್ದಾರೆ, ಇದನ್ನು ನಾವು ಪ್ರತಿಭಟನೆ ಮಾಡುತ್ತೇವೆ. ಈ ಸರ್ಕಾರ ಜನವಿರೋಧಿ ಸರ್ಕಾರ, ಈ ಸರ್ಕಾರ ಪ್ರಜಾಪ್ರಭುತ್ವ ವಿರೋಧ ಸರ್ಕಾರ, ಇದು ಸಂವಿಧಾನ ವಿರೋಧ ಸರ್ಕಾರ, ಇವರು ಪ್ರಜಾತಂತ್ರದ ಮೌಲ್ಯಗಳನ್ನು ಹಾಳು ಮಾಡುತ್ತಿದ್ದಾರೆ, ಎಲ್ಲಾ ಶಾಸಕರ ಹಕ್ಕುಗಳನ್ನು ಕಿತ್ತುಕೊಳ್ಳುತ್ತಿದ್ದಾರೆ. ಅದಕ್ಕೋಸ್ಕರ ನಾವು ಇದನ್ನು ವಿರೋಧ ಮಾಡಿ walkout ಮಾಡುತ್ತಿದ್ದೇವೆ. We will walk out.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

ಶ್ರೀ ಎಸ್. ಸುರೇಶ್‌ಕುಮಾರ್ : ಸಭಾಧ್ಯಕ್ಷರು ಒಂದು Ruling ಕೊಟ್ಟಿದ್ದನ್ನು ಗಮನಕ್ಕೆ ತಂದೆ. ತಾವೂ ಕೂಡ ನನ್ನ Ruling ಅನ್ನು reserve ಮಾಡಿದ್ದೇನೆ, ಕೊಡುತ್ತೇನೆಂದು ಹೇಳಿದಿರಿ. They questioned the Speaker and walkout, ನಿಜವಾಗಿಯೂ ಇವರ ವರ್ತನೆ privilege ಅಡಿಯಲ್ಲಿ ಬರುತ್ತದೆ. ಇದು breach of privilege. ಇವತ್ತು ವಿರೋಧ

ಪಕ್ಷದ ನಾಯಕರು, ಸದಸ್ಯರು ಏನು Speaker ವಿರುದ್ಧ walkout ಮಾಡುತ್ತಿದ್ದಾರೆ, ಇದು ಹಕ್ಕುಚ್ಯುತಿ, ಸದನದ ಹಕ್ಕುಚ್ಯುತಿ ಎಂದು ತಮ್ಮ ಗಮನಕ್ಕೆ ತರುತ್ತೇನೆ. ಅದರ ಬಗ್ಗೆ ತಾವೇನು ಕ್ರಮ ತೆಗೆದುಕೊಳ್ಳುತ್ತೀರೋ, ತೆಗೆದುಕೊಳ್ಳಿ.

2. ಮುಖ್ಯಮಂತ್ರಿಯವರ ಹೇಳಿಕೆ:

ವಿಷಯ : ಬೆಂಗಳೂರು ನಗರ ಜಿಲ್ಲೆ ಮತ್ತು ಬೆಂಗಳೂರು ಸುತ್ತಮುತ್ತಲು ಒತ್ತುವರಿಯಾಗಿರುವ ಸರ್ಕಾರಿ ಜಮೀನುಗಳನ್ನು ತೆರವುಗೊಳಿಸುವ ಬಗ್ಗೆ ಈ ಹಿಂದೆ ನೇಮಕಗೊಂಡಿದ್ದು ಜಂಟಿ ಸದನ ಸಮಿತಿಯ ವರದಿಯನ್ನು ಅನುಷ್ಠಾನಗೊಳಿಸುವ ಬಗ್ಗೆ.

(ಈ ಹಂತದಲ್ಲಿ ಕಾಂಗ್ರೆಸ್ ಸದಸ್ಯರು ಪುನಃ ಸದನಕ್ಕೆ ಆಗಮಿಸಿದರು)

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಬೆಂಗಳೂರು ನಗರ ಮತ್ತು ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಐದು ತಾಲ್ಲೂಕುಗಳಲ್ಲಿ ಅತ್ಯಂತ ಬೆಲೆ ಬಾಳುವ ಸರ್ಕಾರದ ಜಮೀನನ್ನು ಒತ್ತುವರಿ ಮಾಡಿ ಕೊಟ್ಯಾಂತರ ರೂಪಾಯಿಗಳ ಅವ್ಯವಹಾರ ನಡೆದ ಬಗ್ಗೆ ಈ ಹಿಂದೆ 2006ರಲ್ಲಿ ವಿಧಾನ ಮಂಡಲದ ಉಭಯ ಸದನಗಳಲ್ಲಿ ನಡೆದ ಚರ್ಚೆ ನಂತರ, ಸಮಗ್ರ ತನಿಖೆಗಾಗಿ ದಿನಾಂಕ: 17–6–2006 ರಲ್ಲಿ ಮಾನ್ಯ ಶ್ರೀ. ಎ.ಟಿ.ರಾಮಸ್ವಾಮಿ ಇವರ ಅಧ್ಯಕ್ಷತೆಯಲ್ಲಿ ಜಂಟಿ ಸದನ ಸಮಿತಿಯನ್ನು ರಚಿಸಲಾಗಿತ್ತು.

ಜಂಟಿ ಸದನ ಸಮಿತಿಯು 2 ಮಧ್ಯಂತರ ವರದಿಗಳನ್ನು ತಯಾರಿಸಿ ಸಲ್ಲಿಸಿದ ನಂತರ ಅಂತಿಮ ವರದಿಯನ್ನು ದಿನಾಂಕ: 21–09–2007 ರಂದು ಸಲ್ಲಿಸಿರುತ್ತದೆ.

ಮೇಲ್ಕಂಡ ವರದಿಗಳನ್ವಯ ಕಂದಾಯ ಇಲಾಖೆಗೆ ಸೇರಿದ ಒಟ್ಟು 33,878 ಎಕರೆಗಳ ಒತ್ತುವರಿಯನ್ನು ಗುರ್ತಿಸಲಾಗಿದೆ.

ಜಂಟಿ ಸದನ ಸಮಿತಿ ವರದಿಯನ್ವಯ ಸರ್ಕಾರಿ ಜಮೀನುಗಳ ಒತ್ತುವರಿ ತೆರವುಗೊಳಿಸಲು ಸರ್ಕಾರ ಕ್ರಮ ಕೈಗೊಂಡು ಒಟ್ಟು 9033–00 ಎಕರೆ ಒತ್ತುವರಿಯನ್ನು ತೆರವುಗೊಳಿಸಲಾಗಿದೆ.

ಬೆಂಗಳೂರು ಸುತ್ತಮುತ್ತಲೂ ಅತಿಕ್ರಮವಾಗಿರುವ ಸರ್ಕಾರಿ ಜಮೀನುಗಳ ಒತ್ತುವರಿ ತೆರವುಗೊಳಿಸುವ ಬಗ್ಗೆ ಇತ್ತೀಚೆಗೆ ವಿಧಾನ ಮಂಡಲದಲ್ಲಿ ಗೌರವಾನ್ವಿತ ಸದಸ್ಯರು ಸರ್ಕಾರದ ಗಮನಕ್ಕೆ ತಂದಿರುವ ಸರ್ಕಾರ ಕಳಕಳಿಯಿಂದ ಗಮನಿಸಿದೆ.

ಈ ವಿಷಯದಲ್ಲಿ ಜಂಟಿ ಸದನ ಸಮಿತಿಯು ನೀಡಿರುವ ವರದಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಹಾಗೂ ಪತ್ತೆ ಹಚ್ಚಲಾದ ಜಮೀನನ್ನು ಸಂರಕ್ಷಿಸುವ, ಖುಲ್ಲಾ ಪಡಿಸುವ ಮತ್ತು ದಾಖಲೆಗೆ ತೆಗೆದುಕೊಳ್ಳುವ ಕಾರ್ಯದ ಜೊತೆಗೆ ಇಂತಹ ಪ್ರಕರಣಗಳು ಮರುಕಳಿಸ ದಿರುವಂತೆ ಒಂದು ವ್ಯವಸ್ಥೆಯನ್ನು ಕಾನೂನು ಚೌಕಟ್ಟಿನಲ್ಲಿ ರೂಪಿಸುವುದು ಅತ್ಯವಶ್ಯಕವಾಗಿದೆ.

ಆದ್ದರಿಂದ ಜಂಟಿ ಸದನ ಸಮಿತಿಯ ವರದಿಯ ಮೇಲೆ ಮತ್ತು ಭವಿಷ್ಯದಲ್ಲಿ ರಾಜ್ಯದಾದ್ಯಂತ ಸರ್ಕಾರಿ ಭೂಮಿಯನ್ನು ಸಂರಕ್ಷಿಸುವ ಬಗ್ಗೆ ಕ್ರಮ ಕೈಗೊಳ್ಳುವ ಸಲುವಾಗಿ ಶ್ರೀ ವಿ.ಬಾಲಸುಬ್ರಮಣಿಯನ್,ಭಾ.ಆ.ಸೇ (ನಿವೃತ್ತ) ಇವರ ಅಧ್ಯಕ್ಷತೆಯಲ್ಲಿ ಕೆಳಕಂಡ ಸದಸ್ಯರನ್ನೊಳಗೊಂಡ ಸರ್ಕಾರಿ ಜಮೀನು ಸಂರಕ್ಷಣಾ ಕಾರ್ಯಪಡೆಯನ್ನು ರಚಿಸಲು ಕ್ರಮ ತೆಗೆದುಕೊಳ್ಳ ಲಾಗುವುದು.

1. ಶ್ರೀ ವಿ.ಬಾಲಸುಬ್ರಮಣಿಯನ್, ಭಾ.ಆ.ಸೇ. (ನಿವೃತ್ತ)–ಅಧ್ಯಕ್ಷರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ–ಸದಸ್ಯರು
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ–ಸದಸ್ಯರು
4. ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ–ಸದಸ್ಯರು
5. ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ–ಸದಸ್ಯರು
6. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ–ಸದಸ್ಯರು
7. ಆಯುಕ್ತರು, ಭೂಮಾಪನ ಹಾಗೂ ಭೂದಾಖಲೆಗಳ ಇಲಾಖೆ–ಸದಸ್ಯರು

8. ಆಯುಕ್ತರು, ನೋಂದಣಿ ಮತ್ತು ಮುದ್ರಾಂಕ ಇಲಾಖೆ–ಸದಸ್ಯರು
9. ಪ್ರಾದೇಶಿಕ ಆಯುಕ್ತರು, ಬೆಂಗಳೂರು–ಸದಸ್ಯರು
10. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ–ಸದಸ್ಯ ಕಾರ್ಯದರ್ಶಿ

ಸರ್ಕಾರಿ ಜಮೀನುಗಳನ್ನು ಸಂರಕ್ಷಿಸಲು ನಮ್ಮ ಸರ್ಕಾರ ಬದ್ಧವಾಗಿದೆಂದು ಮತ್ತೊಮ್ಮೆ ಈ ಮೂಲಕ ಸದನದ ಗಮನಕ್ಕೆ ತರಬಯಸುತ್ತೇನೆ.

ಆ ಸಮಿತಿಯ ಅಧ್ಯಕ್ಷರಾಗಿ ಕೆಲಸ ಮಾಡಿದ್ದ ಶ್ರೀ ಎ.ಟಿ.ರಾಮಸ್ವಾಮಿಯರು ಮತ್ತು ಸಮಿತಿಯ ಸದಸ್ಯರು ಹಗಲು ರಾತ್ರಿ ಪ್ರಾಮಾಣಿಕ ಶ್ರಮ ಹಾಕಿ

(12-30 PM)

ಮಾಹಿತಿಗಳನ್ನು ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಅವರಿಗೆಲ್ಲ ಅಭಿನಂದನೆ ಸಲ್ಲಿಸುತ್ತೇನೆ. ಇವತ್ತು ಕೇವಲ ಬೆಂಗಳೂರಿಗೆ ಸೀಮಿತವಾಗಿ ಇದನ್ನು ಮಾಡುತ್ತಿಲ್ಲ. ಬಹಳ ಪ್ರಮುಖವಾದ ಅಂಶವೆಂದರೆ ರಾಜ್ಯಾದ್ಯಂತ ಸರ್ಕಾರಿ ಭೂಮಿಯನ್ನು ಸಂರಕ್ಷಿಸುವ ಬಗ್ಗೆ ಕ್ರಮ ಕೈಗೊಳ್ಳುವ ಸಲುವಾಗಿ ಈ ಸಮಿತಿಯನ್ನು ರಚಿಸಿದ್ದೇನೆ. ಜೊತೆಗೆ, ಈಗ ಬಿಡುಗಡೆಯಾಗಿ ಇದರಲ್ಲಿ ತೆಗೆದುಕೊಂಡಿರುವ 9,033 ಎಕರೆ ಜಮೀನಿನಲ್ಲೂ ಬಹಳಷ್ಟು ಕೋರ್ಟು ಗಳಲ್ಲಿ ಕೇಸ್ ಇದೆ. ಇವರೆಲ್ಲ ಪ್ರಭಾವಿ ವ್ಯಕ್ತಿಗಳು. ಎಲ್ಲಿ ಏನು ಬೇಕಾದರೂ ತಡೆದು ಅದನ್ನು ಅನುಭವಿಸುವುದು ಅವರಿಗೆ ಗೊತ್ತಿದೆ. ನಾನೊಂದು ಸೂಚನೆ ಕೊಡುತ್ತಿದ್ದೇನೆ, ತತ್‌ಕ್ಷಣ 33,878 ಎಕರೆ ಜಮೀನು ಏನು ಇದೆ, ಆ ಜಮೀನಿಗಳಿಗೆಲ್ಲ fencing ಹಾಕುವ ಕಡೆಗೆ ಹೆಚ್ಚು ಗಮನ ಅವರು ಕೊಡಬೇಕು , ಕೋರ್ಟುಗಳಲ್ಲಿರುವ ಕೇಸನ್ನು ವಿಶೇಷ Advocates ಅನ್ನು ನೇಮಕ ಮಾಡಿ ತೆರವುಗೊಳಿಸುವ ಕಡೆ ವಿಶೇಷ ಗಮನ ಮಾಡಬೇಕು, 3 ತಿಂಗಳಿಗೊಮ್ಮೆ ಸನ್ಮಾನ್ಯ ಪ್ರತಿಪಕ್ಷದ ನಾಯಕರು, ಪ್ರಮುಖರನ್ನೊಳಗೊಂಡಂಥ ಆ ಒಂದು ಸಮಿತಿಯ ಮುಂದೆ ಸಭೆಯನ್ನು ಏರ್ಪಡಿಸುವ ಮೂಲಕ ನಿಮಗೆ ಯಾವ ಮಾಹಿತಿಗಳು ಸಿಗುತ್ತವೆ, ಈ ಅವ್ಯವಹಾರಗಳು ನಿಲ್ಲಬೇಕೆನ್ನುವ ಕಳಕಳಿಯಿಂದ ಯಾವ ಅನೇಕ ವಿಷಯಗಳು ನಿಮ್ಮ ಗಮನಕ್ಕೆ ಬರುತ್ತವೆ ಅದೆಲ್ಲವನ್ನು ಈ ಸಮಿತಿಯ ಅಧ್ಯಕ್ಷರಾದ ಶ್ರೀ ವಿ.ಬಾಲಸುಬ್ರಹ್ಮಣಿಯನ್‌ರವರ ಗಮನಕ್ಕೆ ಮತ್ತು ಸಮಿತಿಯ ಸದಸ್ಯರ ಗಮನಕ್ಕೆ ತಂದು ಯಾವುದೇ ಪ್ರಭಾವಕ್ಕೆ ಅವರು ಬಲಿಯಾಗದೆ, ಯಾವುದೇ ಒತ್ತಡಕ್ಕೆ

ಮಣಿಯದೆ, ಯಾವುದೇ ರಾಜಕಾರಣಿಗಳ ಒತ್ತಡಕ್ಕೆ ಮಣಿಯದೆ, ಈ ಭೂಮಿ ಒತ್ತುವರಿ ಮಾಡಿರುವವರು ಎಷ್ಟೇ ದೊಡ್ಡವರಿರಲಿ ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ಈ ಸಮಿತಿ ರಚಿಸಲಾಗಿ. ಅದಕ್ಕೆ ನಿಮ್ಮೆಲ್ಲರ ಸಂಪೂರ್ಣ ಸಹಕಾರವನ್ನು ನಾನು ಈ ಸಂದರ್ಭದಲ್ಲಿ ಬಯಸುತ್ತಿದ್ದೇನೆ.

ಶ್ರೀ ಆರ್.ರೋಷನ್ ಬೇಗ್ : ಸನ್ಮಾನ್ಯ ಮುಖ್ಯಮಂತ್ರಿಯವರು ಎ.ಟಿ.ರಾಮಸ್ವಾಮಿಯವರ ವರದಿ ಬಗ್ಗೆ action ತೆಗೆದುಕೊಂಡಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಇದರಲ್ಲಿ ಬಹಳಷ್ಟು ಜನ ಪ್ರಭಾವಿ ವ್ಯಕ್ತಿಗಳು, ರಾಜಕಾರಣಿಗಳಿರಬಹುದು, ಎಲ್ಲಾ ಪಕ್ಷದ ರಾಜಕಾರಣಿಗಳಿರಬಹುದು, ಕೇವಲ ರಾಜಕಾರಣಿಗಳಲ್ಲ, ಸಾಕಷ್ಟು ಜನ ಅಧಿಕಾರಿಗಳೂ ಕೂಡ ಇದರಲ್ಲಿ involve ಆಗಿದ್ದಾರೆ. ಒಂದು ಸಮಿತಿ ಮಾಡಿ ಒಳ್ಳೆಯ ಅಧಿಕಾರಿಯಾದ ಶ್ರೀ ವಿ.ಬಾಲಸುಬ್ರಹ್ಮಣಿಯನ್‌ರವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದೀರಿ, ಸರ್ಕಾರಕ್ಕೆ ನನ್ನ ಸಲಹೆ ಏನೆಂದರೆ, ತಾವು ಜಾಗವನ್ನು ಏನು seize ಮಾಡಿದ್ದೀರಿ, ಆ ಜಾಗವನ್ನು auction ಮಾಡುವುದಕ್ಕೆ ಬಿಡಬೇಡಿ, auction ಮಾಡಬೇಡಿ. ಆ ಜಾಗಗಳನ್ನು auction ಮಾಡಿದರೆ ಅದಕ್ಕೆಂದೇ ಒಂದು Industrialists Cartel ಇದೆ. ಆ ಕಡೆ ಈ ಕಡೆ ಕೆಲವು ರಾಜಕಾರಣಿಗಳಿದ್ದಾರಲ್ಲಾ ಇವರದೇ ಕಾಟ ಇದೆ. ಇವರೇ ಮತ್ತೆ ಆ auction ನಲ್ಲಿ ಭಾಗವಹಿಸುತ್ತಾರೆ. ಇವರೇ ಒಂದು team ಮಾಡಿಕೊಂಡು ಜಾಸ್ತಿ ರೇಟ್‌ಗೆ ಕೂಗಬಾರದು, quote ಮಾಡಬಾರದು, ಇಷ್ಟೇ rate ಇರಬೇಕೆಂದು ಒಂದು cartel ಮಾಡಿಕೊಂಡಿದ್ದಾರೆ. ಕೆಲವು ಜಮೀನನ್ನು auction ಮಾಡಿರುವುದು ಅವೆಲ್ಲವೂ ಇವರ ಕೈಗೇ ಹೋಗಿದೆ. ಆದ್ದರಿಂದ, ದಯವಿಟ್ಟು ತಾವು ಒಂದು ಇಂಚು ಜಾಗವನ್ನೂ ಕೂಡ auction ಮಾಡಬೇಡಿ. ಯಾವ ಜಾಗವನ್ನು seize ಮಾಡಿದ್ದೀರಿ, ಆ ಜಾಗ ಬೆಂಗಳೂರಿನಲ್ಲಿ lung space ಆಗಿ ಉಳಿಯಲಿ. ಆ ಜಾಗ park ಆಗಿ ಉಳಿಯಲಿ. ಅಲ್ಲಿ ಇಷ್ಟೊಂದು ಕಟ್ಟಡ ಬರುವುದಕ್ಕೆ ಅವಕಾಶ ಕೊಡಬೇಡಿ. ಆ ರಿಪೋರ್ಟ್ ಅನ್ನು Complete ಮಾಡುವುದಕ್ಕೆ ಆಗಲಿಲ್ಲ. ಅದು Complete ಆಗಿದ್ದರೆ ಯಾರ್‍ಯಾರು ಈ ಕಡೆ ಆ ಕಡೆ ಬಹಳ ಜೋರಾಗಿ ಕುಳಿತಿದ್ದಾರಲ್ಲಾ ಇನ್ನೂ ಬಹಳ ಜನರ ಹೆಸರು ಈಚೆಗೆ ಬರುತ್ತಿತ್ತು. ಅಷ್ಟರಲ್ಲಿ Assembly dissolve ಆಗಿ ಆ Committee

ಕೆಲಸ ಅಷ್ಟಕ್ಕೇ ನಿಂತುಹೋಯಿತು. ದಯವಿಟ್ಟು, ಯಾವ ಜಾಗವನ್ನೂ ಸಹ auction ಮಾಡಬೇಡಿ, ಅದು lung space ಆಗಿ ಉಳಿಯಬೇಕು ಎಂದು ಹೇಳುತ್ತಾ ನಾನು ಸನ್ಮಾನ್ಯ ಮುಖ್ಯಮಂತ್ರಿಯವರ ಕ್ರಮವನ್ನು ಮತ್ತೊಮ್ಮೆ ಸ್ವಾಗತ ಮಾಡುತ್ತೇನೆ.

ಶ್ರೀ ಕೆ.ಎಂ.ವಿರೂಪಾಕ್ಷಪ್ಪ : ಮಾನ್ಯ ಸದಸ್ಯರು ಮಾತನಾಡುತ್ತಾ, ಈ ಕಡೆ ಇರತಕ್ಕಂಥವರು ಆ ಕಡೆ ಇರತಕ್ಕಂಥವರು ಎಂದು ಹೇಳಿದರು. ದಯಮಾಡಿ, ಈ ಬಗ್ಗೆ ಚರ್ಚೆ ಮಾಡಬೇಕು. ಯಾರ್‍ಯಾರು ಮಾಡಿದ್ದಾರೆ, ಯಾರ್‍ಯಾರ ಕಾಲದಲ್ಲಿ ಯಾವ್ಯಾವ ಸರ್ಕಾರ ಇದ್ದ ಕಾಲದಲ್ಲಿ ಆಗಿದೆ ಎನ್ನುವ ಬಗ್ಗೆ ಚರ್ಚೆಯಾಗಬೇಕು. ಏಕೆಂದರೆ, ಯಾರ್‍ಯಾರು ಭೂ ಒತ್ತುವರಿ ಮಾಡಿದ್ದಾರೆ, ಅವರ ಹೆಸರು ಬಯಲಿಗೆ. ಯಾವ್ಯಾವ ಸರ್ಕಾರ ಇದ್ದಂಥ ಕಾಲದಲ್ಲಿ, ಎಷ್ಟೆಷ್ಟು ಎಕರೆ ಭೂಮಿಯನ್ನು ಒತ್ತುವರಿ ಮಾಡಿದ್ದಾರೆ? ಆಯಾ ಸಂದರ್ಭದಲ್ಲಿ ಯಾವ್ಯಾವ ಅಧಿಕಾರಿಗಳು ಆ ಸ್ಥಳಗಳಲ್ಲಿ ಇದ್ದರು? ಇದೆಲ್ಲ ಹೊರಗಡೆ ಬರಲಿ. ಅದಕ್ಕಾಗಿ ತಾವು ಚರ್ಚೆಯಾದರೂ ಮಾಡಿ ಇಲ್ಲವಾದರೆ ಅದನ್ನು enquiry ಆದರೂ ಮಾಡಿಸಿ.

ಶ್ರೀ ನರಸಿಂಹನಾಯಕ್(ರಾಜುಗೌಡ) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆಯನ್ನು ನಾನು ಸ್ವಾಗತಿಸಿ ಅವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ. ನಾನೂ ಕೂಡ ಆ ಸಮಿತಿಯ ಒಬ್ಬ ಸದಸ್ಯನಾಗಿದ್ದೆ ನಾವು ಎಲ್ಲಿಯಾದರೂ enquiry ಮಾಡುವುದಕ್ಕೆ ಸ್ಥಳಗಳಿಗೆ ಭೇಟಿ ನೀಡಿದಾಗ ಅಲ್ಲಿಯ ಜನರು ನಮ್ಮ ಮೇಲೆ ದಬ್ಬಾಳಿಕೆ ಮಾಡಿ ನಮ್ಮನ್ನು ಹೊಡೆಯುವಂಥ ಪರಿಸ್ಥಿತಿ ಸಾಕಷ್ಟು ಕಡೆ ಬಂದಿತ್ತು. ಪ್ರಾಣ ಒತ್ತೆ ಇಟ್ಟು ಹೋರಾಡಿ ಮಧ್ಯಂತರ ವರದಿಯನ್ನು ಸಲ್ಲಿಸುವ ಪ್ರಾಮಾಣಿಕ ಪ್ರಯತ್ನವನ್ನು ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರಾದ ನಾವು ಮಾಡಿದ್ದೇವೆ. ಆ ಸಮಿತಿ ತನ್ನ ಪೂರ್ಣಾವಧಿ ಮುಗಿಸಬೇಕಾಗಿತ್ತು. ಆದರೆ, ಸಮಯದ ಕೊರತೆಯಿಂದ ಮತ್ತು ನಡೆದ ರಾಜಕೀಯ ಘಟನೆಗಳಿಂದ ಅದನ್ನು ಪೂರ್ಣ ಮಾಡುವುದಕ್ಕೆ ಆಗಲಿಲ್ಲ. ಅದಕ್ಕೆ ನನ್ನ ಮನವಿ ಏನೆಂದರೆ, ಸಾಕಷ್ಟು ಶಾಸಕರು ಮತ್ತು ಅಧ್ಯಕ್ಷರು ಬಹಳ ಪ್ರಾಮಾಣಿಕತೆಯಿಂದ ಬಹಳ ಕಷ್ಟಪಟ್ಟು ವರದಿ ಸಲ್ಲಿಸಿದ್ದು, ಆ ವರದಿ ಕೇವಲ ವರದಿಯಾಗಿ ಉಳಿಯದೆ ಕಾರ್ಯರೂಪಕ್ಕೆ ಬಂದು ಅದರಿಂದ ನಾವು ಮಾಡಿದ ಕೆಸಲಕ್ಕೆ ನ್ಯಾಯ ಸಿಗಬೇಕು ಮತ್ತು ಅದು ಒಳ್ಳೆಯ ರೀತಿಯಲ್ಲಿ ಉಪಯೋಗವಾಗಬೇಕು. ಕೇವಲ ಬೆಂಗಳೂರು

ಸುತ್ತಮುತ್ತ ಮಾತ್ರವಲ್ಲ, ಇಡೀ ರಾಜ್ಯದಲ್ಲಿ ಇಂಥ ಎಷ್ಟು ಸರ್ಕಾರಿ ಭೂಮಿಯನ್ನು ಕಬಳಿಸಿದ್ದಾರೆ, ಅದರ ಬಗ್ಗೆ ಸಮಗ್ರವಾಗಿ ತನಿಖೆ ಮಾಡುವುದಕ್ಕೆ ಆದೇಶ ಮಾಡಬೇಕು ಮತ್ತು ಅಧಿಕಾರಿಗಳ ಜೊತೆಗೆ ಕೆಲವರು ರಾಜಕಾರಣಿಗಳನ್ನು ಈ ಸಮಿತಿಗೆ ಸೇರಿಸಿಕೊಳ್ಳಬೇಕು. ಜೊತೆಗೆ, ಮೊದಲ ಆ ವರದಿಯಲ್ಲಿ ಯಾರ್ಯಾರ ಹೆಸರು ಇತ್ತೋ ಅವರ ಮೇಲೆ criminal case ಹಾಕಿ ಕಠಿಣ ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮ ಮೂಲಕ ಮುಖ್ಯಮಂತ್ರಿಯವರಿಗೆ ಒತ್ತಾಯಿಸುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಮುಖ್ಯಮಂತ್ರಿಯವರು ಬೆಂಗಳೂರು ನಗರ ಜಿಲ್ಲೆ ಮತ್ತು ಬೆಂಗಳೂರು ಸುತ್ತಮುತ್ತಲೂ ಒತ್ತುವರಿಯಾಗಿರುವ ಸರ್ಕಾರಿ ಜಮೀನುಗಳ ಬಗ್ಗೆ ಈ ಹಿಂದೆ ನೇಮಕಗೊಂಡಿದ್ದ ಜಂಟಿ ಸದನ ಸಮಿತಿಯ ವರದಿಯನ್ನು ಅನುಷ್ಠಾನಗೊಳಿಸುವ ಬಗ್ಗೆ ನಿವೃತ್ತ ಅಧಿಕಾರಿ ಸೇರಿದಂತೆ ಸುಮಾರು 10 ಜನ ಅಧಿಕಾರಿಗಳ ಸಮಿತಿ ರಚಿಸಿದ್ದಾರೆ. ಇದನ್ನು ನಾನು ಮೊದಲನೆಯದಾಗಿ ಸ್ವಾಗತಿಸುತ್ತೇನೆ. ಏಕೆಂದರೆ, ಸುಮಾರು 34 ಸಾವಿರ ಎಕರೆ ಜಮೀನಿನ ಬಗ್ಗೆ ಯಾವುದೇ ನಿರ್ದಾಕ್ಷಿಣ್ಯ ಇಲ್ಲದೆ ನಾವು ಕ್ರಮ ತೆಗೆದುಕೊಳ್ಳುತ್ತೇವೆಂದು ಸನ್ಮಾನ್ಯ ಮುಖ್ಯಮಂತ್ರಿಯವರು ಸದನಕ್ಕೆ ಹೇಳಿರುವುದು ನಿಜಕ್ಕೂ ಸಂತೋಷ.

ನಿನ್ನೆಯ ಘಟನೆ ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬರುತ್ತದೆಯೋ ಇಲ್ಲವೋ ಗೊತ್ತಿಲ್ಲ. ರಾಮಸ್ವಾಮಿಯವರ ಕಮಿಟಿಯಲ್ಲಿ ತಿಳಿಸಿರುವಂತೆ 34 ಸಾವಿರ ಎಕರೆಯಲ್ಲಿ ಯಾರಿಗಾದರೂ ಡಿಸ್‌ಪೋಸ್ ಮಾಡಿದ್ದಾರೆಯೇ ಏನು ಎಂಬುದನ್ನು ದಯಮಾಡಿ ಸದನದ ಗಮನಕ್ಕೆ ತರಬೇಕೆಂದು ನಾನು ಮನವಿ ಮಾಡುತ್ತೇನೆ. ನಿನ್ನೆ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಒಂದು ವಿಚಾರ ಬಂದಿದೆ. ಏನೆಂದರೆ, ದೇವನಹಳ್ಳಿಯಲ್ಲಿ ಎಲ್ಲಾ ರೆವಿನ್ಯೂ ರೆಕಾರ್ಡ್‌ಗಳನ್ನು ಒಂದು ವೆಹಿಕಲ್‌ನಲ್ಲಿ ಲಾರಿಗಟ್ಟಲೆ ತುಂಬಿಕೊಂಡು ಹೋದರು ಎಂದು ಬಂದಿದೆ. ಇದಕ್ಕೇನು ಕಾರಣ? ಇದರ ಹಿಂದಿರುವ ಉದ್ದೇಶ ಏನು? Right to Information ನಲ್ಲಿ ಅರ್ಜಿ ಹಾಕಿದರು. ಅದು ಯಾರದು ಜಾಗ? ಅದ್ಯಾವ ಫೈಲ್ ತುಂಬಿಕೊಂಡು ಹೋದರು? ಇದನ್ನೆಲ್ಲಾ ಹೇಳಬೇಕಾಗುತ್ತದೆ. ಏಕೆಂದರೆ ನಿನ್ನೆಯ ಪತ್ರಿಕೆಯಲ್ಲಿ ದೇವನಹಳ್ಳಿಯ ಸುತ್ತಮುತ್ತಲಿನ ಎಲ್ಲಾ ಕಡತಗಳನ್ನು ತುಂಬಿಕೊಂಡು ಹೋದರು ಎಂದು ಬಂದಿದೆ. ಅದು ಯಾರು ಕಡತ ತುಂಬಿಕೊಂಡು

ಹೋದವರು? ಅದೇನು ಕಾರಣ? ಅಧಿಕಾರಿಗಳೇನಾದರೂ ಅದರ ಜೊತೆಯಲ್ಲಿ ಶಾಮೀಲಾಗಿದ್ದಾರೆಯೆ? ಯಾರಾದರೂ ರಾಜಕಾರಣಿಗಳು ಇದ್ದಾರೆಯೆ? ಏಕೆಂದರೆ, ಅದು ಕಾಂಗ್ರೆಸ್‌ನವರದ್ದೋ, ಜೆಡಿ(ಎಸ್) ನವರದ್ದೋ, ಅಥವಾ ಯಾರದೋ ಎಂದು ದಯಮಾಡಿ ಈ ಸಂದರ್ಭದಲ್ಲಿ ಈ ಸದನಕ್ಕೆ ಸ್ವಲ್ಪ ಹೇಳಬೇಕಾಗುತ್ತದೆ. "ಇಲ್ಲಿ ಎಲ್ಲಾ ಮಾಯ, ಕೊನೆಗೆ ಕಛೇರಿ ಕಡತವೂ ಮಾಯ, ಸಮಿತಿಗೂ ಕಡತ ಅಲಭ್ಯ, ಹುದ್ದೆಗೆ ಪೈಪೋಟಿ, ಮೈಸೂರು ಪೇಪರ್ ಮಿಲ್ಸ್‌ಗೆ ಸೇರಿದ ದೇವನಹಳ್ಳಿ ತಹಶೀಲ್ದಾರ್ ಕಛೇರಿ ದಾಖಲೆ" ಹೀಗೆಂದು ನಿನ್ನೆಯ ವಿಜಯ ಕರ್ನಾಟಕ ಪ್ರತಿಕೆಯಲ್ಲಿ ಬಂದಿದೆ. ಸರ್ಕಾರಿ ಆದೇಶವೂ ಇದರಲ್ಲಿ ಹಾಕಿದ್ದಾರೆ. ಪೂರ್ತಿ ಲೇಖನವನ್ನೇ ನಿನ್ನೆ ಪ್ರಕಟಿಸಿದ್ದಾರೆ. ಅದಕೋಸ್ಕರ, ಎ.ಟಿ.ರಾಮಸ್ವಾಮಿಯವರ ವರದಿ ಪ್ರಕಾರ 34 ಸಾವಿರ ಎಕರೆಯಲ್ಲಿ ಯಾರಿಗಾದರೂ ಜಮೀನನ್ನ ಡಿಸ್‌ಪೋಸ್ ಮಾಡುವುದಕ್ಕೆ ಅಧಿಕಾರಿಗಳ ಲೆವಲ್‌ನಲ್ಲಿ, ರೆವಿನ್ಯೂ ಕಾರ್ಯದರ್ಶಿಗಳ ಲೆವಲ್‌ನಲ್ಲಿ, ಈ ಬಗ್ಗೆ ಕಡತವೇನಾದರೂ ಇದೆಯೆ? ಅಥವಾ ಯಾವುದೂ ಇಲ್ಲಾ ಎನ್ನುವುದಾದರೆ ಅದನ್ನಾದರೂ ಸನ್ಮಾನ್ಯ ಸಭಾನಾಯಕರು ಈ ಸದನಕ್ಕೆ ತಿಳಿಸಬೇಕೆಂದು ನಾನು ತಮ್ಮ ಮುಖೇನ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ (ಶಿರಾ) : ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರ ಮತ್ತು ಸುತ್ತಮುತ್ತಲ ಜಾಗ ಒತ್ತುವರಿಯಾಗಿರುವ ಬಗ್ಗೆ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಕಮಿಟಿ ರಚನೆ ಮಾಡಿದ್ದು ಎರಡು ಮಧ್ಯಂತರ ವರದಿ ಮತ್ತು ಅಂತಿಮವಾದ ವರದಿಯನ್ನು ಕೊಟ್ಟಿದೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಕೊಡುವಾಗ 33,878 ಎಕರೆ ಒತ್ತುವರಿ ಎಂದು ಗುರುತಿಸಲಾಗಿದೆ, ಅದರಲ್ಲಿ 9,033 ಎಕರೆ ಮಾತ್ರ ತೆರವುಗೊಳಿಸಿದ್ದೇವೆ ಎನ್ನುವ ಮಾತನ್ನು ಹೇಳಿದ್ದೀರಿ. ಹೇಳಿಕೆಯ ಉದ್ದೇಶ ಹೇಳುವುದಾದರೆ, ಜಂಟಿ ಸದನ ಸಮಿತಿ ವರದಿಯ ಮೇಲೆ ಭವಿಷ್ಯದಲ್ಲಿ ರಾಜ್ಯಾದ್ಯಂತ ಸರ್ಕಾರಿ ಭೂಮಿಯನ್ನು ಸಂರಕ್ಷಿಸುವ ಬಗ್ಗೆ ಕ್ರಮ ಕೈಗೊಳ್ಳುವ ಸಲುವಾಗಿ ವಿ.ಬಾಲಸುಬ್ರಹ್ಮಣಿಯನ್, ಇವರ ಅಧ್ಯಕ್ಷತೆಯಲ್ಲಿ ಒಂದು ಕಾರ್ಯಪಡೆ ರಚಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎನ್ನುವ ಮಾತನ್ನು ಹೇಳಿದಿರಿ. ಇದು ಏನು ಅರ್ಥ ಬರುತ್ತದೆ ಎಂದರೆ, 9,033 ಎಕರೆ ಈಗಾಗಲೇ ಏನು ಖುಲ್ಲಾಪಡಿಸಿದ್ದೀರಿ, ಖುಲ್ಲಾಪಡಿಸಿರತಕ್ಕಂಥ ಜಮೀನಿಗೆ ಅದನ್ನು ಯಾವ ರೀತಿಯಾಗಿ ಸಂರಕ್ಷಣೆ ಮಾಡಬೇಕೆನ್ನುವುದರ ಬಗ್ಗೆ ಈ ಕಾರ್ಯಪಡೆ

ಯಾಗುತ್ತದೆ ವಿನಾ ಇನ್ನು ಖುಲ್ಲಾಪಡಿಸಿಲ್ಲದೇ ಇರತಕ್ಕಂಥ ಜಮೀನು ಬಹಳ ಇದೆ. ಖುಲ್ಲಾ ಪಡಿಸುವುದಕ್ಕೆ ಏನು ಕ್ರಮ? ಏಕೆ ಖುಲ್ಲಾ ಪಡಿಸುವುದಕ್ಕೆ ಆಗಿಲ್ಲ? ಖುಲ್ಲಾ ಪಡಿಸಿಲ್ಲ ಎಂದರೆ ಯಾವ ಇಲಾಖೆಯ ವ್ಯಾಪ್ತಿಯಲ್ಲಿ ಬರುತ್ತದೆ, ಅವರು ಇಲ್ಲಿಯವರೆಗೆ ಖುಲ್ಲಾ ಪಡಿಸುವುದಕ್ಕೆ ಏಕೆ ಕ್ರಮ ತೆಗೆದುಕೊಂಡಿಲ್ಲ? ಈ ಎಲ್ಲಾ ಪ್ರಶ್ನೆಗಳು ಉದ್ಭವಿಸುತ್ತವೆ. ಏಕೆಂದರೆ, ಒಂದು ಕಡೆ ಸಂರಕ್ಷಣೆ ಮಾಡುವುದರ ಬಗ್ಗೆ ಮಾತನಾಡುತ್ತಿದ್ದೀರಿ. ಇನ್ನೂ ಖುಲ್ಲಾಪಡಿಸಿಲ್ಲವೆಂದ ಮೇಲೆ ಈ ಕಮಿಟಿ ಕುಳಿತುಕೊಂಡು ಏನು ಮಾಡುತ್ತದೆ? ನೀವು ಈಗ ಇದನ್ನು ಕ್ಲಾರಿಫೈ ಮಾಡಬೇಕು. ಕಮಿಟಿಯ ಜವಾಬ್ದಾರಿ ಏನು? ಒಂದು ಸಾರಿ ಖುಲ್ಲಾಪಡಿಸಿದ ಮೇಲೆ ಅವರ ಜವಾಬ್ದಾರಿ ಏನು? ಇನ್ನೂ ಬಾಕಿ ಉಳಿದಿರುವುದಕ್ಕೆ ಖುಲ್ಲಾಪಡಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಅದನ್ನು ನೀವು ವಿಷದವಾಗಿ ಹೇಳಿದರೆ ಬಹುಶಃ ಇದೊಂದು ಸಮಂಜಸವಾದ ಉತ್ತರವಾಗಬಹುದು.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ರಾಮಸ್ವಾಮಿ ನೇತೃತ್ವದ ಉಭಯ ಸದನಗಳ ಸಮಿತಿ 21-09-2007 ರಲ್ಲಿ ಅಂತಿಮವಾದ ವರದಿ ಕೊಟ್ಟದ್ದೇವೆಂದು ಹೇಳಿದ್ದಾರೆ. ಎರಡು ಮಧ್ಯಮ ವರದಿ ಕೊಟ್ಟಿದ್ದಾರೆ. ಇವರು ವರದಿ ಕೊಟ್ಟು ಸುಮಾರು ಎರಡು ವರ್ಷಗಳಾದವು. ಇವರು ವರದಿ ಕೊಟ್ಟ ಎರಡು ವರ್ಷಗಳಲ್ಲಿ ಸರ್ಕಾರ ಇದರ ಮೇಲೆ ಏನೇನು ಕ್ರಮ ತೆಗೆದುಕೊಂಡಿದೆ? ಅದನ್ನು ನೀವು ಇಲ್ಲಿ ಪ್ರಸ್ತಾಪಿಸಿಲ್ಲ. ಇದರಲ್ಲಿ ಯಾರ್‍ಯಾರು ರಾಜಕಾರಣಿಗಳು, ಅಧಿಕಾರಿಗಳು, ಅವರ ಹೆಸರುಗಳು ಮತ್ತು ಅವರ ಮೇಲೆ ಕಾನೂನು ಪ್ರಕಾರ ಏನು ಕ್ರಮ ತೆಗೆದುಕೊಂಡಿದ್ದೇವೆಂದು ಇವತ್ತಿನವರೆಗೂ ಹೇಳಿಲ್ಲ. ಎಲ್ಲೆಲ್ಲಿ ಯಾರ್‍ಯಾರು ಆಕ್ರಮಿಸಿಕೊಂಡಿಸಿದ್ದಾರೆ. ಇವರಿಗೆ ಈಗಿರುವ ಪ್ರಕಾರ, as on today 9,033 ಎಕರೆ ಮಾತ್ರ ತೆರವುಗೊಳಿಸಿದ್ದಾರೆ. ಉಳಿದಂಥ ಸುಮಾರು 25 ಸಾವಿರ ಎಕರೆಗೆ ಅದು ಹೇಗಿದೆ? ಯಾವ ಪರಿಸ್ಥಿತಿಯಲ್ಲಿದೆ ಎನ್ನುವುದು ಈ ಸ್ಟೇಟ್‌ಮೆಂಟ್‌ನಲ್ಲಿ ಗೊತ್ತಿಲ್ಲ. 25 ಸಾವಿರ ಎಕರೆಯಲ್ಲಿ ಯಾರ್‍ಯಾರು ಇದ್ದಾರೆ? ಅವರು ಹೇಗೆ ಬಂದರು? ಇವರು ಬರುವುದಕ್ಕೆ ಯಾರು ಕಾರಣರು? ಅಲ್ಲಿ ಅವರು ಏನು ಮಾಡಿಕೊಂಡಿದ್ದಾರೆ? ಅಲ್ಲಿ structures ಇದೆಯೆ? ಖಾಲಿ ಇದೆಯೆ? ಇನ್ನೇನು ಮಾಡಿಕೊಂಡಿದ್ದಾರೆ? ಕೋರ್ಟಿಗೆ ಎಷ್ಟು ಜನ ಹೋಗಿದ್ದಾರೆ? ಕೋರ್ಟಿಗೆ ಹೋದ ಮೇಲೆ ನೀವು ಏನು ಕೋರ್ಟಿನಲ್ಲಿ

ಮಾಡಿದ್ದೀರಿ? ಇದು ಯಾವ ಅಂಶಗಳು ಇದರಲ್ಲಿ ಇಲ್ಲ. ಈಗ ಈ ಕಮಿಟಿಗೆ ವಹಿಸುತ್ತೇವೆಂದು ಹೇಳಿದ್ದೀರಿ. But ಬಹಳ ಜನ ಅಧಿಕಾರಿಗಳು ಇದರಲ್ಲಿ collude ಆಗಿದ್ದಾರೆ. ಅಧಿಕಾರಿಗಳು collude ಆಗದೇ ಈ ರೀತಿ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಇದರಲ್ಲಿ ಯಾವ್ಯಾವ ಅಧಿಕಾರಿಗಳು Collude ಆಗಿದ್ದಾರೆಂದು ಆ ವರದಿಯಲ್ಲಿ ಇದ್ದರೆ ಎರಡು ವರ್ಷದಿಂದ ಅವರ ಮೇಲೆ ಇವತ್ತಿನವರೆಗೆ ಏಕೆ ಕ್ರಮ ತೆಗೆದುಕೊಂಡಿಲ್ಲ? Why the Government is sleeping over the matter? ತೆರವುಗೊಳಿಸಲಿಕ್ಕೆ ಲೀಗಲ್ ಆಗಿ ಏನು ಮಾಡಿದ್ದೀರಿ? ಎಷ್ಟು ಎಕರೆ ಕೋರ್ಟಿನಲ್ಲಿ ಇದೆ? ಎಷ್ಟು ಎಕರೆ ಬೇರೆಯವರ ಸ್ವಾಧೀನದಲ್ಲಿವೆ? ಮತ್ತೆ ಯಾವ್ಯಾವ ತರಹ ಇವೆ? ಫಿಜಿಕಲ್ ಆಗಿ ಇವತ್ತು ಯಾವ ತರಹ ಇವೆ? ಇದರ ಬಗ್ಗೆ ನೀವು ಇಲ್ಲಿ ಏನೂ ಹೇಳಿಲ್ಲ. ಈಗ ಬಾಲಸುಬ್ರಹ್ಮಣಿಯನ್ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡುತ್ತೇವೆಂದು ಹೇಳಿದ್ದೀರಿ. ಬಹುಶಃ ನನಗೆ ಅನ್ನಿಸುತ್ತದೆ, ಇವರು ಮುಂದೆ ಪ್ರೊಟೆಕ್ಷನ್, ಅವರು ಹೇಳಿರುವ ರೀತಿ ನೋಡಿದರೆ, ಸರ್ಕಾರಿ ಜಮೀನನ್ನು ಸಂರಕ್ಷಿಸಲು ನಮ್ಮ ಸರ್ಕಾರ ಬದ್ಧವಾಗಿದೆ ಎಂದು ಮತ್ತೊಮ್ಮೆ ಈ ಮೂಲಕ ಸದನದ ಗಮನಕ್ಕೆ ತರಬಯಸುತ್ತೇನೆ. ಮಾಡಿರುವ ಉದ್ದೇಶವೂ ಕೂಡ ಈ ಹಿಂದೆ 2006 ರಲ್ಲಿ ವಿಧಾನ ಮಂಡಲದ ಉಭಯ ಸದನಗಳಲ್ಲಿ ನಡೆದ ಚರ್ಚೆಯ ನಂತರ ಸಮಗ್ರ ತನಿಖೆಗಾಗಿ ಈ ಸಮಿತಿಯನ್ನು ಮಾಡಿದರು. ಇವತ್ತು ನನ್ನ ಪ್ರಕಾರ ಅವರು ಏನು ಶಿಫಾರಸ್ಸುಗಳನ್ನು ಮಾಡಿದ್ದಾರೋ, ಆ ಕಮಿಟಿಯ ಫೈನಲ್ ರಿಪೋರ್ಟ್ ಕೂಡ ಇಲ್ಲಿ ಇಡಬೇಕು. ಕಮಿಟಿಯವರು ಏನು ಶಿಫಾರಸ್ಸುಗಳನ್ನು ಮಾಡಿದ್ದಾರೆ, ಆ ಶಿಫಾರಸ್ಸುಗಳನ್ನು ಇವರು ಪಾಲನೆ ಮಾಡಿದ್ದಾರೋ ಇಲ್ಲವೋ? ಈ ಸರ್ಕಾರ ಬಂದು ಒಂದು ವರ್ಷದ ಮೇಲಾಯಿತು. ನೀವು ಏನು ಮಾಡಿದ್ದೀರಿ ಎಂಬುದನ್ನು ಇಲ್ಲಿ ಹೇಳಬೇಕಾಗುತ್ತದೆ? ಎಷ್ಟು ಕ್ರಿಮಿನಲ್ ಕೇಸ್ ಹಾಕಿದ್ದೀರಿ ಎಂಬುದು ಗೊತ್ತಿಲ್ಲ. 9033 ಎಕರೆಯಲ್ಲಿ ಎಲ್ಲವನ್ನೂ ಡಿಸ್‌ಪೋಸ್ ಮಾಡಿಬಿಟ್ಟಿದ್ದೀರಾ? ಮಾನ್ಯ ಅಚಾರ್ಯರವರೆ, ಇವರು ಹೋದಸಾರಿ ಕ್ಯಾಪಿಟಲ್ ರೆಸಿಟ್ಸ್‌ನಲ್ಲಿ ಮೂರು ಸಾವಿರ ಕೋಟಿ ಬರುತ್ತದೆಂದು ಹಾಕಿಕೊಂಡಿದ್ದರು. ಬಜೆಟ್ ಎಂದರೆ ಎಲ್ಲಾ estimated. ನಾವು 25 ಸಾವಿರ ಕೋಟಿ anticipate ಮಾಡುತ್ತೇವೆ. ಖರ್ಚು ಮಾಡುವುದು ಒಂದು ಸಾವಿರ ಕೋಟಿ ಎಂದರೆ ಆಗುತ್ತದೆಯೆ?

Anticipation ಕೂಡ reasonable ಆಗಿ ಇರಬೇಕು. It should be nearer to truth. ನಮ್ಮ ಹಿಂದಿನ ವರ್ಷಗಳಲ್ಲಿ ಏನು ಅನುಭವಗಳಾಗಿವೆ, ಅದರ ಮೇಲೆ anticipate ಮಾಡಬೇಕು ಹೊರತು, ಬಜೆಟ್ ಎಸ್ಟಿಮೆಂಟ್ ಎಲ್ಲಾ ಮಾಡುವುದು ಹಾಗೆ 25 ಸಾವಿರ ಕೋಟಿ ರೂಪಾಯಿ ಪ್ಲಾನ್‌ಗೆ ಖರ್ಚು ಮಾಡುತ್ತೇವೆಂದು ಹೇಳಿ ಹತ್ತು ಸಾವಿರ ಕೋಟಿ ಮಾಡಿದರೆ, ನಮಗೆ ಗೊತ್ತಾಗಲಿಲ್ಲ ಎಂದು ಸರ್ಕಾರ ಹೇಳುವುದಕ್ಕೆ ಬರುವುದಿಲ್ಲ. ಹಾಗಾದರೆ ಆ ಸರ್ಕಾರ ಫೇಲ್ ಆಯಿತು ಎಂದರ್ಥ. ಆದ್ದರಿಂದ ಈ 9,033 ಎಕರೆಯಲ್ಲಿ ಎಷ್ಟು ಮಾರಾಟವಾಗಿದೆ? ಎಷ್ಟು ರೇಟ್‌ಗೆ ಮಾರಾಟ ಮಾಡಿದ್ದೀರಿ? ಉಳಿದಿರುವುದು ಏಕೆ ಮಾರಾಟವಾಗಿಲ್ಲ? ಸರ್ಕಾರಕ್ಕೆ ಎಷ್ಟು ದುಡ್ಡು ಬಂದಿದೆ? ನಿಮ್ಮ ಹೇಳಿಕೆಯಲ್ಲಿ ಈ ಎಲ್ಲಾ ಅಂಶಗಳು ಇದ್ದಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ನೀವು ಈ ಎಲ್ಲಾ ಫ್ಯಾಕ್ಟ್ಸ್ ಮಾಡಿಲ್ಲ. ಇದರ ಜೊತೆಗೆ ಅಧಿಕಾರಿಗಳು ಯಾರ್‍ಯಾರು ಇದರಲ್ಲಿ ಸೇರಿದ್ದಾರೆ. ಆ ಅಧಿಕಾರಿಗಳ ಮೇಲೆ ಕ್ರಿಮಿನಲ್ ಕೇಸ್ ಹಾಕಿ, ಅಧಿಕಾರಣಿಗಳು ಸೇರಿದ್ದರೆ, ಅವರ ಮೇಲೂ ಕ್ರಿಮಿನಲ್ ಕೇಸ್ ಹಾಕಿ. ಇಬರಿಬ್ಬರ ಮೇಲೂ ಕ್ರಿಮಿನಲ್ ಕೇಸ್ ಹಾಕಿ. ಮುಂದೆ ಈ ರೀತಿ ಯಾರು ಮಾಡಬಾರದ ರೀತಿಯಲ್ಲಿ ಕಠಿಣವಾದ ಕ್ರಮಗಳನ್ನು ನೀವು ತೆಗೆದುಕೊಂಡರೆ ಇನ್ನು ಮುಂದೆ ಸರ್ಕಾರದ ಜಮೀನನ್ನು ಯಾರೂ ಕೂಡ ಕಾನೂನುಬಾಹಿರವಾಗಿ ಆಕ್ರಮಿಸಿಕೊಳ್ಳಲಿಕ್ಕೆ ಹೋಗಲ್ಲ. ನಿಲ್ಲಿಸುತ್ತಾರೆ. ಇಲ್ಲದೇ ಹೋದರೆ ಏನಾಗುತ್ತದೆ, ನಾವು ಇಲ್ಲಿಗೆ ಪದೇ ಪದೇ ಬರುತ್ತೇವೆ. ಈಗಾಗಲೇ ಒಂದು ಬಿಲ್ ತಂದಿದ್ದೀರಿ, ಆ ಬಿಲ್‌ನಲ್ಲಿ ಏನು ತಂದಿದ್ದೀರಿ, unauthorized occupants ಗೆ ಎಲ್ಲಾ ಅಲ್ಲಿ ಮನೆ ಕಟ್ಟಿಕೊಂಡಿರುವವರಿಗೆ Commercial establishment ಮಾಡತಕ್ಕಂಥವರಿಗೆ ಅವರಿಗೆಲ್ಲಾ regularize ಮಾಡುತ್ತೇವೆಂದು ಹೊರಟಿದ್ದೀರಿ. ಇವು ಅದರಲ್ಲಿ ಇವೆಯೇ ಎಂದು ಹೇಳಬೇಕು. ಆ ಜಮೀನು ಎಲ್ಲಾ ಇವೆಯೇ ಎಂದು ಹೇಳಬೇಕು. ಅದರೂಳಗೆ ಬರುತ್ತವೆಯೋ ಇಲ್ಲವೋ ಎಂದು ಹೇಳಬೇಕು. ಇವು ಬೇರೆಯೆ? ಅವು ಬೇರೆಯೆ? ಈ ಎಲ್ಲಾ ಅಂಶಗಳು ತಮ್ಮ Statementನಲ್ಲಿ ಇದ್ದರೆ ಬಹಳ ಒಳ್ಳೆಯದಾಗುತ್ತಿತ್ತು. ಮಾನ್ಯ ಮುಖ್ಯಮಂತ್ರಿ ಗಳು ಅವುಗಳನ್ನೆಲ್ಲಾ ತಂದಿದ್ದರೆ ಅನುಕೂಲವಾಗುತ್ತಿತ್ತು. ಜೊತೆಗೆ ಆ ಕಮಿಟಿಗೆ ಒಬ್ಬ Law Secretary ಹಾಕಿ. ಇದರಲ್ಲಿ ಅವರು ಇಲ್ಲವೇ ಇಲ್ಲ. ಕೋರ್ಟಿಗೆ ಹೋಗಿರುವಂಥವುಗಳಿಗೆ ಮತ್ತು ಬೇರೆಯವುದಕ್ಕೆಲ್ಲಾ ಈ

ಕಮಿಟಿಗೆ legally advisr ಮಾಡುವುದಕ್ಕೆ ಒಬ್ಬರು ಬೇಕು ಅಲ್ಲವೆ? Law Secretary ಒಬ್ಬರನ್ನು ಇದರಲ್ಲಿ ಹಾಕಿ.

ಶ್ರೀ ಟಿ.ಬಿ.ಜಯಚಂದ್ರ (ಶಿರಾ) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ಇದಕ್ಕೆ ಸಂಬಂಧಪಟ್ಟಂತೆ ಎರಡು ಮಧ್ಯಂತರ ವರದಿಯನ್ನು ಈಗಾಗಲೇ ಮಂಡಿಸಲಾಗಿದೆ. ಆದರೆ, ಅಂತಿಮ ವರದಿಯನ್ನು ಇದುವರೆಗೂ ಸಹ ಈ ಸಭೆಯ ಮುಂದೆ ಮಂಡಿಸಿಲ್ಲ ಏಕೆ? ಅದನ್ನು ಸಭೆಯ ಮುಂದೆ ಮಂಡಿಸಿ, ಅದು ಸಭೆಯ ವಸ್ತುವಾದ ನಂತರ ಮಾಧ್ಯಮದ ಕೈ ಸಿಕ್ಕಿ ಇದರಲ್ಲಿ ಯಾರ್‍ಯಾರು ಒತ್ತುವರಿ ಮಾಡಿದ್ದಾರೆಂಬ ವಿಚಾರ ಪ್ರಚಾರವಾಗುತ್ತಿತ್ತು. ಆದ್ದರಿಂದ, ಇದು ಏಕೆ ಇಲ್ಲಿ ಮಂಡನೆ ಆಗಿಲ್ಲ ಮತ್ತೆ ಇದು ಯಾವ ಹಂತದಲ್ಲಿ ನಿಂತಿದೆ ಎಂಬುದರ ಬಗ್ಗೆ ಕೂಡ ನನಗೆ ಅರ್ಥವಾಗಿಲ್ಲ. ನನಗೆ ಅರ್ಥವಾಗಿರುವ ಪ್ರಕಾರ ಹೇಳುವುದಾದರೆ, ಹಿಂದೆ ಸರ್ಕಾರ ಡಿಸಾಲ್ವ್ ಆದ ಮೇಲೆ ಇದರ ಅಂತಿಮ ವರದಿಯನ್ನು ಯಾರು ಕೂಡ ಸಭೆ ಮುಂದೆ ಮಂಡಿಸಲಿಲ್ಲ. ಇದರ ಪ್ರತಿ ಬೇಕೆಂದು ನಾವು ಅನೇಕ ಸಂದರ್ಭದಲ್ಲಿ ಕೇಳಿದ್ದಾಗಲೂ ಕೂಡ ಇದರ ಪ್ರತಿ ನಮಗೆ ಸಿಗಲಿಲ್ಲ. ಮತ್ತೆ ಇನ್ನು ಹೌಸ್‌ನಲ್ಲಿ ಪ್ಲೇಸ್ ಆಗಿಲ್ಲವೆಂಬ ಮಾತನ್ನು ಹೇಳುತ್ತಿದ್ದಾರೆ. ಮಧ್ಯಂತರ ವರದಿ ಈಗಾಗಲೇ ಬಿಡುಗಡೆಯಾಗಿದೆ. ಮತ್ತೆ ಮಾನ್ಯ ರಾಮಸ್ವಾಮಿಯವರು ವರದಿಯನ್ನು ಪತ್ರಿಕೆಯ ಮುಖಾಂತರ ಬಿಡುಗಡೆ ಮಾಡಿರತಕ್ಕಂಥದ್ದು ನಮಗೆಲ್ಲ ಗೊತ್ತಿದೆ. ಇದರಲ್ಲಿ ಯಾರ್‍ಯಾರು ಒತ್ತುವರಿ ಮಾಡಿದ್ದಾರೆಂದು ಮತ್ತು ಯಾವ ಯಾವ ರಾಜಕಾರಣಿಗಳು ಶಾಮೀಲಾಗಿದ್ದಾರೆಂಬ ಅಂಶ ಈಗಾಗಲೇ ಪತ್ರಿಕೆಯಲ್ಲಿ ಬಂದಿದೆ. ಆದರೆ, ಈಗ ಅದರ ಸಂಪೂರ್ಣವಾದಂಥ ವರದಿಯನ್ನು ಸಭೆಯ ಮುಂದೆ ಇಟ್ಟರೆ ಅದರ ಬಗ್ಗೆ ಸಾಕಷ್ಟು ರೀತಿಯಲ್ಲಿ ಪ್ರಚಾರವಾಗುತ್ತದೆ. ಮತ್ತೆ ಸಾರ್ವಜನಿಕರಲ್ಲಿಯೂ ಕೂಡ ಅವೇರ್‌ನೆಸ್ ಬರುತ್ತದೆ ಮತ್ತೆ ಅದರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ನಿಜವಾದ ಸಂರಕ್ಷಣೆಯೆಂದು ತಾವು ಏನು ಅಭಿಪ್ರಾಯ ಪಡುತ್ತೀರಿ. ಆದರೆ, ಇದನ್ನು ಸಾರ್ವಜನಿಕರ ಮುಂದೆ ಇಟ್ಟಾಗ ಮಾತ್ರ ಅದರ ಸಂರಕ್ಷಣೆ ಸಾಧ್ಯ ಎಂಬುದನ್ನು ತಾವು ಅರ್ಥ ಮಾಡಿಕೊಂಡಿದ್ದೀರೆಂದು ನಾನು ತಿಳಿದು ಕೊಂಡಿದ್ದೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಇವತ್ತು ವರದಿಯನ್ನು ಇಲ್ಲಿ ಮಂಡಿಸಿದ್ದರೆ ಚೆನ್ನಾಗಿತ್ತು. ದಯಮಾಡಿ ಮೊದಲು ವರದಿಯನ್ನು ಮಂಡಿಸಿ.

ಶ್ರೀ ಸಿ.ಟಿ.ರವಿ (ಚಿಕ್ಕಮಗಳೂರು) : ಮಾನ್ಯ ಅಧ್ಯಕ್ಷರೆ, 33,878 ಎಕರೆ ಜಮೀನನ್ನು ಒತ್ತುವರಿ ಮಾಡಿರುವ ಬಗ್ಗೆ ಮಾನ್ಯ ಎ.ಟಿ.ರಾಮಸ್ವಾಮಿಯವರ ಸಮಿತಿ ಹೇಳಿದೆ. ಆದರೆ, ಇದು ಕೇವಲ ಸ್ಯಾಂಪಲ್ ಎಂದು ಹೇಳುವುದಕ್ಕೆ ಬಯಸುತ್ತೇನೆ. ಮತ್ತೆ ಹುಡುಕಿದರೆ ಇದರ 2,3 ಪಟ್ಟು ಸಿಗುವಂಥ ಸಾಧ್ಯತೆಗಳಿವೆ. ಕಳ್ಳರು ತಪ್ಪಿಸಿಕೊಳ್ಳುವುದಕ್ಕೆ ನೂರಾರು ದಾರಿ ಇರುತ್ತದೆ. ಅಂದರೆ, ಕಳ್ಳರು ಇಲ್ಲಿಂದ ಹೋದ ತಕ್ಷಣ ಜುಡಿಷಿಯಲ್‌ನಲ್ಲಿ ತಪ್ಪಿಸಿ ಕೊಳ್ಳುತ್ತಾರೆ. ಆದ್ದರಿಂದ, ವಿಶೇಷ ನ್ಯಾಯಾಲಯವನ್ನು ಸ್ಥಾಪನೆ ಮಾಡಿ ಇದಕ್ಕೆ ಸಂಬಂಧಪಟ್ಟಂಥ ಪ್ರಕರಣಗಳೆಲ್ಲವನ್ನು ಈ ಒಂದು ನ್ಯಾಯಾಲಯ ದಲ್ಲಿಯೇ ಇತ್ಯರ್ಥಗೊಳಿಸುವಂಥ ತೀರ್ಮಾನವನ್ನು ತೆಗೆದುಕೊಂಡರೆ ಒಳ್ಳೆಯದು. ಏಕೆಂದರೆ, ಈ ರೀತಿಯಾಗಿ ಮಾಡಿದಾಗ ಕಳ್ಳರನ್ನು ಕಟ್ಟಿ ಹಾಕಬಹುದೆಂದು ನನಗೆ ಅನಿಸುತ್ತದೆ. ಇಲ್ಲದಿದ್ದರೆ ಏನಾಗುತ್ತದೆಂದರೆ, ಇಲ್ಲಿಂದ ನ್ಯಾಯಾಲಯಕ್ಕೆ ಹೋಗಿರುವಂಥ ಕಡತಗಳು ಮಾಯವಾಗುತ್ತವೆ. ನಮ್ಮ ಪರವಾಗಿ ವಾದ ಮಾಡತಕ್ಕಂತವರು ಮೌನವಾಗಿ ಕುಳಿತುಕೊಂಡಿ ರುತ್ತಾರೆ. ಒಂದು ಸಿಸಿ ಟಿವಿ ಕ್ಯಾಮರಾ ಇಟ್ಟು ನಮ್ಮ ವಕೀಲರುಗಳು ಅಲ್ಲಿ ಹೇಗೆ ವಾದ ಮಾಡುತ್ತಾರೆಂಬುದನ್ನು ಏನಾದರೂ ನೋಡಿದರೆ ಎಷ್ಟು ಸಮರ್ಥವಾಗಿ ಸರ್ಕಾರದ ಪ್ರಕರಣಗಳನ್ನು ನಿಭಾಯಿಸು ತ್ತಾರೆಂಬುದು ಅರ್ಥವಾಗುತ್ತದೆ. ಈಗಿನ ಪ್ರಕರಣಗಳಲ್ಲದೆ ಹಿಂದಿನ ಪ್ರಕರಣಗಳನ್ನು ಸೇರಿಸಿ ಕೊಂಡಂತೆ ನಾನು ಹೇಳುತ್ತಿದ್ದೇನೆ. ಈ ರೀತಿಯಾಗಿ ನಾವು ಮಾಡದಿದ್ದರೆ ಅಲ್ಲಿ ಫೇಲ್ ಆಗಿಬಿಡುತ್ತೇವೆ. ಆದ್ದರಿಂದ, ಆ ರೀತಿ ಮತ್ತೆ ಆಗದ ಹಾಗೆ ಒಂದಷ್ಟು ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ರವಿಯವರು ಹೇಳಿರುವ ಸಲಹೆಗೆ ವಿರೋಧ ಪಕ್ಷದವರೆಲ್ಲರೂ ಸಹ ಒಪ್ಪಿಕೊಳ್ಳುತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಎ.ಟಿ.ರಾಮಸ್ವಾಮಿಯವರು ವರದಿಯಲ್ಲಿ ಅನೇಕ ಜನರ ಹೆಸರುಗಳಿವೆ. ಮತ್ತೆ ಅದರಲ್ಲಿ ನಮ್ಮ ಹೆಸರು ಕೂಡ ಇದೆ. ಈಗ ನಾನು ಹೇಳುವುದೇನೆಂದರೆ, ಒತ್ತುವರಿ ಮಾಡಿರುವವರು ಅಥವಾ ಭೂಗಳ್ಳರು ಯಾರು ಎಂದು ಮತ್ತು ಯಾರು ನಿಜವಾಗಿ ಒತ್ತುವರಿ ಮಾಡಿದ್ದಾರೆಂಬ ವಿಷಯಗಳೆಲ್ಲ ಹೊರಕ್ಕೆ ಬರಬೇಕಾಗುತ್ತದೆ. ಆದರೆ, ಇದನ್ನು ಹೀಗೆಯೇ

ಪೆಂಡಿಂಗ್ ಇಟ್ಟಿದ್ದರೆ ನಮ್ಮ ಹೆಸರು ಕ್ಲಿಯರ್ ಆಗುವುದಿಲ್ಲ, ಮತ್ತೆ ಇದನ್ನು ಈಗ ಯಾರು ಮಾಡಿದ್ದಾರೆಯೋ ಅವರು ಮತ್ತೆ ಮಾಡಿಕೊಂಡು ಹೋಗುತ್ತಿರುತ್ತಾರೆ. ಮಾನ್ಯ ಸಿ.ಟಿ.ರವಿಯವರು ಹೇಳಿರುವ ಸಲಹೆ ಬಹಳ ಉತ್ತಮವಾಗಿದೆ. ಒಟ್ಟಿನಲ್ಲಿ ಇದರ ಬಗ್ಗೆ ಇತ್ಯರ್ಥವಾಗಬೇಕು. ಇಲ್ಲದಿದ್ದರೆ ಎಲ್ಲರನ್ನೂ ಸಹ ಅದೇ ಪಟ್ಟಿಯಲ್ಲಿ ಸೇರಿಸಿಬಿಡುತ್ತಾರೆ. ಅಂದರೆ, ಮಾನ್ಯ ಎ.ಟಿ.ರಾಮಸ್ವಾಮಿಯವರು ನೀಡಿರುವ ವರದಿಯಲ್ಲಿ ಹೆಸರು ಬಂದ ತಕ್ಷಣ ಅದರಲ್ಲಿರುವವರೆಲ್ಲಾ ಭೂಗಳ್ಳರೆಂಬ ತಪ್ಪು ಗ್ರಹಿಕೆ ಆಗುತ್ತದೆ. ಆದ್ದರಿಂದ, ಮಾನ್ಯ ಸಿ.ಟಿ.ರವಿಯವರು ನೀಡಿರುವ ಸಲಹೆಯನ್ನು ಸರ್ಕಾರ ದಯವಿಟ್ಟು ಒಪ್ಪಿಕೊಂಡು ಅದಕ್ಕೊಂದು ವಿಶೇಷವಾದಂಥ ನ್ಯಾಯಾಲಯವನ್ನು ಮಾಡಿ ಇದೆಲ್ಲಾ ಇತ್ಯರ್ಥವಾಗುವ ರೀತಿಯಲ್ಲಿ ಮಾಡಿ. ಯಾರು ತಪ್ಪು ಮಾಡಿದ್ದಾರೆಯೋ ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಯಾರು ತಪ್ಪು ಮಾಡಿಲ್ಲವೋ ಅಂಥವರನ್ನು ಬಿಡಿ. ಈ ರೀತಿ ಮಾಡುವುದಕ್ಕಾಗಿ ಮಾನ್ಯ ಸದಸ್ಯರು ನೀಡಿರುವ ಸಲಹೆ ಒಳ್ಳೆಯದಾಗಿರುವುದರಿಂದ ಇದನ್ನು ಸರ್ಕಾರ ಒಪ್ಪಿಕೊಳ್ಳಬೇಕೆಂದು ಎಲ್ಲರ ಪರವಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ.ಎಸ್.ಪುಟ್ಟೇಗೌಡ (ಶ್ರವಣಬೆಳಗೊಳ) : ಮಾನ್ಯ ಅಧ್ಯಕ್ಷರೆ, ಈ ಕಮಿಟಿ ರಚನೆ ಆದ ಸಂದರ್ಭದಲ್ಲಿ ನಾನು ಆ ಭಾಗದಲ್ಲಿ ಕುಳಿತುಕೊಂಡಿದ್ದೆ. ಶ್ರೀಮತಿ ವಿಜಯಲಕ್ಷ್ಮಿ ಬಂಡಿಸಿದ್ದೆಗೌಡ ಮತ್ತು ನಮಗೆಲ್ಲಾ ಸಯಟ್ ಕೊಟ್ಟಿದ್ದಾರೆಂಬ ವಿಚಾರ ಪ್ರಸ್ತಾಪವಾದಾಗ ಗಲಾಟೆ ಆಯಿತು. ಈ ಸರ್ಕಾರಕ್ಕೆ ತಾಕತ್, ಗಂಡಸತನ ಇದ್ದರೆ ಇದಕ್ಕೊಂದು ಸಮಿತಿ ಮಾಡಬೇಕೆಂದು ಮಾನ್ಯ ಅಧ್ಯಕ್ಷರು ಹೇಳಿದರು. ಆಗ ಇದಕ್ಕೆ ಸಮಿತಿ ರಚನೆ ಮಾಡಲಾಯಿತು. ಇದರ ಬಗ್ಗೆ ನನಗೂ ಕೂಡ ಕಾಳಜಿ ಇದೆ. ಏಕೆಂದರೆ, ಇದರ ಬಗ್ಗೆ ಹೇಳಿಕೆ ಕೊಡುವುದಕ್ಕೂ ಕೂಡ ಮಾನ್ಯ ಯಡಿಯೂರಪ್ಪನವರಿಗೂ ಸಹ ಕಷ್ಟ ಇದೆ. ಏಕೆಂದರೆ, ಇದನ್ನು ಮುಟ್ಟಿದರೆ ಯಾವಾಗ ಸರ್ಕಾರ ಉರುಳುತ್ತದೆಯೋ ಮತ್ತು ಯಾರ್‍ಯಾರ ತಲೆ ಹೋಗುತ್ತದೆಯೋ ಗೊತ್ತಿಲ್ಲ. ಆದ್ದರಿಂದ, ಇದು ಅಷ್ಟು ಸುಲಭವಾದಂಥ ಮಾತಲ್ಲ. ಇದಕ್ಕೆ ಆ ಪಕ್ಷ ಈ ಪಕ್ಷವೆಲ್ಲ ಬೇಡ. ಇದರಲ್ಲಿ ಎಲ್ಲರೂ ಕೂಡ ಇದ್ದಾರೆ. 40 ರೂಪಾಯಿ ಕೂಲಿ ಪಡೆದುಕೊಳ್ಳು ವವರ ವಿಚಾರವೇ ಬೇರೆ. ಆದರೆ, ಈ ದೇಶದಲ್ಲಿ, ರಾಜ್ಯದಲ್ಲಿ ದಿನಕ್ಕೆ 40 ಲಕ್ಷ ಆದಾಯ ಬರುವಂಥವರನ್ನು ಮುಟ್ಟುವುದಕ್ಕೆ ಮಾನ್ಯ ಯಡಿಯೂರಪ್ಪ ನವರಿಗೆ, ಮಾನ್ಯ ಸಿದ್ದರಾಮಯ್ಯನವರಿಗೆ, ಮಾನ್ಯ ರೇವಣ್ಣನವರಿಗೆ ಕಷ್ಟವೆಂದು ಹೇಳುವುದಕ್ಕೆ ಬಯಸುತ್ತೇನೆ. ಇದನ್ನು ಮಾಡುವುದಕ್ಕೆ ಬಹಳ ಇಚ್ಛಾಶಕ್ತಿ

ಬೇಕು. ಏಕೆಂದರೆ, ಇಲ್ಲಿನ ಹೇಳಿಕೆಯನ್ನು ಹೊರಗಡೆ ಜನ ಕೇಳಿಕೊಂಡು ಲೊಚಗುಟ್ಟರೆ ಏನೂ ಪ್ರಯೋಜನವಾಗುವುದಿಲ್ಲ. ಇದರ ಬಗ್ಗೆ ಬಹಳ ಗಂಭೀರತೆಯಿಂದ ಮತ್ತು ದೃಢವಾದಂಥ ಸಂಕಲ್ಪ ಇಟ್ಟು ಕೊಂಡು ಮಾಡಿದರೆ ಈ ರಾಜ್ಯದ ಬಡವರಿಗೆ ಗಂಜಿ ಕೊಡುವುದಲ್ಲದೆ ಎಲ್ಲರ ಮನೆಯ ಹತ್ತಿರಕ್ಕೆ ಬೆಳ್ಳಿ ತಗಡು ಹಾಕಿಸುವಷ್ಟು ದುಡ್ಡು ಇವರಿಂದ ಬರುತ್ತದೆ. ಆದರೆ, ಇದನ್ನು ಮಾಡುವುದಕ್ಕೆ ಪ್ರಾಪರ್ ಆದ ಶಕ್ತಿ ಬೇಕು. ನಾನು ಹೇಳುವುದೇ ನಡೆಯಬೇಕೆಂದು ಮಾನ್ಯ ಯಡಿಯೂರಪ್ಪನವರು ಇಲ್ಲಿ ಹೇಳಿಕೆ ಕೊಡುವುದು, ಇತ್ತ ಕಡೆ ಮಾನ್ಯ ಸಿದ್ದರಾಮಯ್ಯನವರು ಮತ್ತು ಮಾನ್ಯ ರೇವಣ್ಣನವರು ಹಾಗೂ ನಾವೆಲ್ಲರೂ ಕೂಗಿಕೊಂಡು ಹೋದರೆ ಇದಾಗು ವುದಿಲ್ಲ. ಇದರಲ್ಲಿ ಯಾವುದೇ ಪಕ್ಷ ಎಂದು ಇಲ್ಲ. ಯಾವುದೇ ಸರ್ಕಾರ ಬಂದರೂ ಸಹ ಈ ಪುಣ್ಯಾತ್ಮರು ಆ ಸರ್ಕಾರದ ರಕ್ಷಣೆ ಪಡೆಯುವುದಕ್ಕೆ ಎಲ್ಲಾ ಕಡೆ ಈ ರೀತಿಯಾದ ಬಂಡವಾಳವನ್ನು ಬಿಟ್ಟಿರುತ್ತಾರೆ. ಇದರಲ್ಲಿ ಅಧಿಕಾರಿಗಳು, ರಾಜಕಾರಣಿಗಳು ಅಥವಾ ವ್ಯಾಪಾರಸ್ಥರೇ ಇರಲಿ ಪರವಾಗಿಲ್ಲ. ಇದನ್ನು ಮಟ್ಟ ಹಾಕಿ ಒಂದು ತಹಬಂದಿಗೆ ತರಬೇಕು. ಈಗ ರಚನೆ ಮಾಡಿರುವ ಸುಬ್ರಹ್ಮಣಿಯನ್‌ರವರ ಕಮಿಟಿ ಅಲ್ಲಿಗೆ ಹೋಗಿ ಗುಡಿಸಲು ಹಾಕಿಕೊಂಡಿರುವ ಬಡವರನ್ನು ತೆರವು ಮಾಡಿಸಿದರೆ ಆಗುವುದಿಲ್ಲ. ಈ ರಾಷ್ಟ್ರ ಮತ್ತು ರಾಜ್ಯವನ್ನು ತಮ್ಮ ಕೈಯಲ್ಲಿಟ್ಟುಕೊಳ್ಳಬೇಕೆಂಬ ಆಸೆ ಇಟ್ಟುಕೊಂಡಿರುವ ಪುಣ್ಯಾತ್ಮರು ಇದರಲ್ಲಿ ಇದ್ದಾರೆ. ಈ ಊರನ್ನು ಕೆಂಪೇಗೌಡರು ಕಟ್ಟಿದಂಥ ಸಂದರ್ಭದಲ್ಲಿ ಕೆರೆಗಳು, ಉದ್ಯಾನವನಗಳು ಇದ್ದವು ಬ್ರಿಟೀಷರು ಇದ್ದಂಥ ಸಂದರ್ಭದಲ್ಲಿ ಗುಂಡುತೋಪುಗಳಿಗೆ ಸಂಬಂಧಪಟ್ಟಂತೆ ನಿಯಮಗಳೆಲ್ಲವನ್ನು ಮಾಡಿಟ್ಟಿದ್ದರು. ಆದರೆ, ಇವತ್ತಿನ ದಿವಸ ಯಾವುದೇ ಗುಂಡುತೋಪುಗಳೂ ಸಹ ಉಳಿದಿಲ್ಲ. ಹಳ್ಳಿಯಲ್ಲಿರುವ ಯಾವುದಾದರೊಂದು ಗುಂಡುತೋಪನ್ನು ಮಂಜೂರು ಮಾಡಿ ಎಂದು ಕೇಳಿದರೆ ಮಂಜೂರು ಮಾಡುವುದಕ್ಕೆ ಕಾನೂನು ಇಲ್ಲವೆಂದು ಸರ್ಕಾರ ಹೇಳುತ್ತದೆ. ಆದರೆ, ಇಲ್ಲಿದ್ದಂಥ ಕೆರೆಗಳು, ಗುಂಡುತೋಪಗಳೆಲ್ಲವೂ ಎಲ್ಲಿಗೆ ಹೋದವು? ಬೆಂಗಳೂರು ನಗರಕ್ಕೆ ಹಲವಾರು ಹಳ್ಳಿಗಳು ಸೇರಿಕೊಂಡಿವೆ. ಆದ್ದರಿಂದ, ಈ ಹಳ್ಳಿಯಲ್ಲಿದ್ದಂಥವುಗಳೆಲ್ಲವೂ ಇವತ್ತಿವ ದಿವಸ ಉಳಿದಿರ ಬೇಕಲ್ಲವೇ? ಇವತ್ತಿನ ದಿವಸ ಏನಾಗಿದೆ ಎಂದರೆ, ಒರಿಜನಲ್ ರೆಕಾರ್ಡ್ ಗಳಿಗೆ ಪಹಣಿ ಮತ್ತು ಇತರೇ ದಾಖಲೆಗಳು ಸಿಗುವುದು ಕಷ್ಟವಾಗಿದೆ. ಆದರೆ, ಈ ರೀತಿಯಾಗಿ ಬೋಗಸ್ ಮಾಡತಕ್ಕಂಥವರಿಗೆ ಕರೆಕ್ಟ್ ಆಗಿ ಎಲ್ಲಾ

ದಾಖಲೆಗಳು ಸಿಗುತ್ತವೆ. ಅವರು ಹೇಳಿದ ಸಮಯಕ್ಕೆ ಪಹಣಿಯನ್ನು ಸುಂದರವಾಗಿ ಮಾಡಿಸಿ ಮನೆಗೆ ತಂದು ಕೊಟ್ಟು ಹೋಗುತ್ತಾರೆ. ಇವರೇನು ಯಾವುದೇ ನೆಮ್ಮದಿ ಕೇಂದ್ರಕ್ಕೆ ಮತ್ತು ಯಾವುದೇ ಕಛೇರಿಗೆ ಹೋಗ ಬೇಕಾಗಿಲ್ಲ. ಇದು ಗಂಭೀರವಾದಂಥ ವಿಚಾರವಾಗಿದೆ. ಸರ್ಕಾರ ಇದಕ್ಕೆ ಬದ್ಧವಾಗಿದೆ ಎಂದು ಮತ್ತು ಈ ಒಂದು ಸರ್ಕಾರದಲ್ಲಿ ನಡೆದಿದೆ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಎಲ್ಲಾ ಸರ್ಕಾರಗಳ ಕಾಲದಲ್ಲಿಯೂ ಮತ್ತು ರಂಗದವರು ಅಂದರೆ, ನೌಕರರು, ರಾಜಕಾರಣಿಗಳು, ವ್ಯಾಪಾರಸ್ಥರು ಇದರಲ್ಲಿ ಇದ್ದಾರೆ. ಒಟ್ಟಿನಲ್ಲಿ ಒಂದು ನಮೂನೆಯ ಜನರು ಇದರಲ್ಲಿ ಸೇರಿಕೊಂಡಿದ್ದಾರೆ. ಇವರೆಲ್ಲರನ್ನು ಒಂದು ತಹಬಂದಿಗೆ ತರುವುದರ ಬಗ್ಗೆ ಮಾನ್ಯ ಸಭಾ ನಾಯಕರು ಮತ್ತು ಇತ್ತ ಕಡೆ ಮಾನ್ಯ ವಿರೋಧ ಪಕ್ಷದ ನಾಯಕರು ಕೂಡ ಸಮ್ಮತಿ ನೀಡಿರುವ ಪ್ರಕಾರ ಪಕ್ಷಭೇದ ಮರೆತು ಇದರ ಬಗ್ಗೆ ಒಂದು ನಿರ್ಧಾರ ತೆಗೆದುಕೊಳ್ಳಬೇಕು. ಈ ಕಡೆ ಗ್ಯಾಲರಿಯಲ್ಲಿರುವ ಪ್ರೆಸ್‌ನವರು ಮತ್ತು ಆ ಕಡೆ ಇರುವ ಸರ್ಕಾರಿ ನೌಕರರು ಇದ್ದಾರೆ. ಇವರಲ್ಲಿಯೂ ಕೂಡ ಕೆಲವರು ಯೋಗ್ಯರಿದ್ದಾರೆ ಮತ್ತು ಇದರಲ್ಲಿ ಶಾಮೀಲಾ ಗಿರುವಂಥ ಕದೀಮರು ಸಹ ಇದ್ದಾರೆ. ಯಾವ ಜಾತಿಯಲ್ಲಿ ಮತ್ತು ರಂಗದಲ್ಲಿ ಒಳ್ಳೆಯವರು ಕೆಟ್ಟವರು ಇಲ್ಲ ಎನ್ನುವ ಹಾಗಿಲ್ಲ. ಇದರ ಬಗ್ಗೆ ಕಠಿಣ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಎಲ್ಲರ ಸಹಮತ ಇದೆ. ಆದ್ದರಿಂದ, ಇದನ್ನು ಕಟ್ಟುಬದ್ಧವಾಗಿ ಮಾಡಿದರೆ ಇದನ್ನು ಪಕ್ಷಭೇದ ಮರೆತು ನಾವೆಲ್ಲರೂ ಖಂಡಿತವಾಗಿ ಮೆಚ್ಚಿಕೊಳ್ಳುತ್ತೇವೆಂಬ ಮಾತನ್ನು ಈ ಸಂದರ್ಭದಲ್ಲಿ ಮಾನ್ಯ ಯಡಿಯೂರಪ್ಪನವರಿಗೆ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಂ. ಶ್ರೀನಿವಾಸ್ (ರಾಜರಾಜೇಶ್ವರಿನಗರ) : ಮಾನ್ಯ ಅಧ್ಯಕ್ಷರೆ, ರಾಮಸ್ವಾಮಿಯವರು ನೀಡಿರುವ ವರದಿ ಪ್ರಕಾರ ಒತ್ತುವರಿಯಾಗಿರುವ 33 ಸಾವಿರ ಎಕರೆಯಲ್ಲಿ 9 ಸಾವಿರ ಎಕರೆ ಜಾಗವನ್ನು ವಾಪಸ್ಸು ತೆಗೆದುಕೊಂಡಿ ದ್ದೇವೆಂದು ಹೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಒಂದು ವಿಶೇಷ ನ್ಯಾಯಾಲಯ ಸ್ಥಾಪನೆ ಮಾಡಿದರೆ ಒಳ್ಳೆಯದೆಂದು ಮಾನ್ಯ ಸಿ.ಟಿ.ರವಿ ಯವರು ಸಲಹೆ ಕೊಟ್ಟರು. ಇದಕ್ಕೆ ನಾನೂ ಕೂಡ ಬೆಂಬಲವನ್ನು ವ್ಯಕ್ತಪಡಿ ಸುತ್ತೇನೆ. 1983 ರಲ್ಲಿ ನಾನು ಈ ಕಡೆಯೇ ಕುಳಿತುಕೊಂಡಿದ್ದೆ. ಮತ್ತೆ ಆ ಕಡೆ ಸಹ ಕುಳಿತುಕೊಂಡಿದ್ದೆ. 25 ವರ್ಷಗಳ ಹಿಂದೆಯೇ ನಾನು ಶಾಸಕನಾಗಿ ಇಲ್ಲಿಗೆ ಬಂದಿದ್ದೇನೆ. ನನಗೆ ಗೊತ್ತಿರುವ ಹಾಗೆ ಇವತ್ತಿನವರೆಗೂ ಯಾವುದೇ ಸರ್ಕಾರಿ ಜಮೀನು ಮುಟ್ಟುಗೋಲು ಆಗಿಲ್ಲ. ಈಗ ಈ ಸರ್ಕಾರ

ಇರಬಹುದು, ಅಥವಾ ಇನ್ನೊಂದು ಸರ್ಕಾರ ಬರಬಹುದು ಇದು ಮುಖ್ಯವಲ್ಲ. ಬೆಂಗಳೂರಿನಲ್ಲಿರುವ ವಿಶ್ವಭಾರತಿ ಕೋ–ಆಪರೇಟಿವ್ ಸೊಸೈಟಿ ಬಗ್ಗೆ ಪತ್ರಿಕೆಯಲ್ಲೆಲ್ಲಾ ಮೊನ್ನೆದಿವಸ ಬಂದಿದೆ. 80 ಕೋಟಿ ರೂಪಾಯಿ ಬೆಲೆ ಬಾಳುವ ಸರ್ಕಾರಿ ಜಮೀನನ್ನು ಅಂದರೆ, ಲ್ಯಾಂಡ್ ಟ್ರಿಬ್ಯುನಲ್ ಜಮೀನು ರೈತರಿಗೆ ಗ್ರಾಂಟ್ ಆಗದೇ ಇದರ ಬಗ್ಗೆ ಕೇಸ್ ನಡೆಯುತ್ತಿರುವ ಸಂದರ್ಭದಲ್ಲಿ ಈ ಜಮೀನುಗಳನ್ನು ಸೈಟ್‌ಗಳನ್ನಾಗಿ ಮಾರಾಟ ಮಾಡಿದ್ದಾರೆ. ಈ ರೀತಿಯಾಗಿ ಮಾರಾಟವಾದ ನಂತರ ಅನೇಕ ಸರ್ಕಾರಗಳು ಬಂದಿವೆ. ಇವತ್ತಿನ ದಿವಸ ಅಲ್ಲಿ ದೊಡ್ಡ ದೊಡ್ಡ ಮನೆಗಳನ್ನು ನಿರ್ಮಾಣ ಮಾಡಿದ್ದಾರೆ. ಆದರೆ, ಯಾವುದೇ ಸರ್ಕಾರ ಆ ಜಾಗವನ್ನು ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ಬೆಂಗಳೂರು ಪಕ್ಕದಲ್ಲಿರುವ ಗಿರಿನಗರದಲ್ಲಿ 80 ಎಕರೆ ಜಮೀನು ಮತ್ತು ಇದೇ ರೀತಿಯಾಗಿ ಚಿಕ್ಕಬಳ್ಳಾಪುರದ ಹತ್ತಿರ 150 ಎಕರೆ ಜಮೀನು ಆಗಿದೆ.

ಅಧ್ಯಕ್ಷರು : ಮಾನ್ಯ ಶ್ರೀನಿವಾಸ್‌ರವರೆ, ನೀವು ಮಾತನಾಡಿ ಬೇಡವೆಂದು ಹೇಳುವುದಿಲ್ಲ. ಮಾತನಾಡುವುದಕ್ಕೆ ತಮಗೆ ಅವಕಾಶ ಕೊಡುತ್ತೇನೆ. ಆದರೆ, ನಾನು ಹೇಳುವುದೇನೆಂದರೆ, ತಾವು ಸ್ಪೆಸಿಫಿಕ್ ಆಗಿ ಒಂದೊಂದು ಕೇಸ್ ಅನ್ನು ರೆಫರ್ ಮಾಡಿ ಚರ್ಚೆ ಮಾಡುವುದು ಬೇಡ. ಜನರಲ್ ಆಗಿ ಇದರ ಬಗ್ಗೆ ಸಲಹೆ ಕೊಡಿ. ಇಲ್ಲದಿದ್ದರೆ ಇದರ ಬಗ್ಗೆ ಪ್ರತ್ಯೇಕವಾದ ಒಂದು ನೋಟೀಸ್ ಕೊಡಿ.

ಶ್ರೀ ಎಂ. ಶ್ರೀನಿವಾಸ್ : ಮಾನ್ಯ ಅಧ್ಯಕ್ಷರೆ, ನಾನು ಸಾಮಾನ್ಯವಾಗಿ ಎದ್ದು ನಿಂತು ಹೆಚ್ಚು ಮಾತನಾಡುವುದಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ಎರಡು ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ. ವಿಶೇಷ ನ್ಯಾಯಾಲಯ ಮಾಡಬೇಕೆಂದು

(1-00 PM)

ಮಾನ್ಯ ಸಿ.ಟಿ.ರವಿಯವರು ಪ್ರಸಾಪ ಮಾಡಿರುವಂಥದ್ದಕ್ಕೆ ನಾನೂ ಸಹ ಬೆಂಬಲವನ್ನು ಕೊಡುತ್ತೇನೆ. ಆದರೆ, ನಾನು ಹೇಳುವುದೇನೆಂದರೆ, ಇದಕ್ಕೆ ಸಂಬಂಧಪಟ್ಟಂತೆ ವಿಶೇಷ ನ್ಯಾಯಾಲಯವನ್ನು ಪ್ರತ್ಯೇಕವಾಗಿ ಮಾಡದಿದ್ದರೆ ಏನಾಗುತ್ತದೆಂದರೆ, ಸರ್ಕಾರಿ ಜಮೀನುಗಳ ಪಹಣಿಯನ್ನು ತಿದ್ದುಪಡಿ ಮಾಡಿ ಇವತ್ತಿನ ದಿವಸ ಕೋರ್ಟ್‌ಗೆ ಹೋಗಿ ಸ್ಟೇ ತರುತ್ತಾರೆ. ಈ ರೀತಿಯಾದಾಗ ಇದು ಬೇಗ ತೀರ್ಮಾನವಾಗುವುದಿಲ್ಲ. ಇಂಥ. ಪ್ರಕರಣಗಳನ್ನು ಸುಮಾರು 10–15 ವರ್ಷಗಳಿಂದ ಯಾವುದೇ ಸರ್ಕಾರ ತೀರ್ಮಾನ ಮಾಡಿಲ್ಲ. ಆದರೆ, ಈಗ ಸರ್ಕಾರಿ ಜಮೀನನ್ನು ಮುಟ್ಟುಗೋಲು

ಹಾಕಿಕೊಳ್ಳಬೇಕಾದರೆ ವಿಶೇಷ ನ್ಯಾಯಾಲಯವನ್ನು ಸ್ಥಾಪನೆ ಮಾಡಿ, ಇದರಿಂದ ಅಂತಿಮವಾದ ತೀರ್ಮಾನವನ್ನು ತಾವು ಬೇಗನೆ ತೆಗೆದುಕೊಳ್ಳ ಬೇಕೆಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಜಮೀನು ಹರಾಜು ವಿಚಾರದಲ್ಲಿ ಹಿಂದೆ ಇದ್ದ ಸರ್ಕಾರದಲ್ಲಿ ಆಗಿರಬಹುದು, ಇವತ್ತು ನಾವು ಮಾಡಬಹುದು, ಆದರೆ ಹರಾಜು ಹಾಕಿದರೆ ಮಾತ್ರ ಅದು ಸರಿಯಾದುದು ಅಲ್ಲ. ಏಕೆಂದರೆ ಇವತ್ತು ನಾವು ಹರಾಜು ಹಾಕುತ್ತೇವೆ. ಇವತ್ತು ಅದು 50 ಲಕ್ಷ ರೂ. ಒಂದು ಕೋಟಿಗಳವರೆಗೆ ಹೋಗುತ್ತದೆ. ನಾಳೆ ನಮ್ಮ ಸರ್ಕಾರಕ್ಕೆ ಒಂದು ಆಟದ ಮೈದಾನ ಬೇಕು, ಆಸ್ಪತ್ರೆ ಬೇಕು, ಸರ್ಕಾರಕ್ಕೆ ಜಮೀನು ಬೇಕಾದರೆ ಅದೇ ಜಮೀನಿಗೆ 5 ಕೋಟಿ ರೂ.ಗಳನ್ನು ಹೇಳುತ್ತಾರೆ. ಅದರ ಬಗ್ಗೆ ಮಾನ್ಯ ರೋಷನ್‌ಬೇಗ್‌ರವರು ಅದನ್ನು ಹರಾಜು ಹಾಕಬಾರದೆಂದು ಬೆಳಕನ್ನು ಚೆಲ್ಲಿದರು. ಅದಕ್ಕೆ ನಾನು ಈ ಸಂದರ್ಭದಲ್ಲಿ ಜಮೀನನ್ನು ಹರಾಜು ಹಾಕಬಾರದೆಂದು ಹೇಳಿ, ಅದಕ್ಕೆ ಒಂದು ವಿಶೇಷ ನ್ಯಾಯಾಲಯ ಸ್ಥಾಪನೆ ಮಾಡಬೇಕೆಂದು ಹೇಳಿ ಸಲಹೆಯನ್ನು ಕೊಡುತ್ತೇನೆ.

ಅಧ್ಯಕ್ಷರು : ಮಾನ್ಯ ಕಾನೂನು ಸಚಿವರು ಹೇಳಿ. ಇದನ್ನು ಇಲ್ಲಿಗೆ ಮುಗಿಸೋಣ. ಬೇರೆ ವಿಷಯವನ್ನು ಚರ್ಚೆ ಮಾಡೋಣ.

ಶ್ರೀ ಎನ್.ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಎ.ಟಿ.ರಾಮಸ್ವಾಮಿಯವರ ಈ ಸಮಿತಿಯಲ್ಲಿ ಒಬ್ಬ ಸಕ್ರಿಯ ಸದಸ್ಯನಾಗಿ ಕಾರ್ಯನಿರ್ವಹಿಸಿದಂಥ ಒಂದು ಅವಕಾಶ ಮತ್ತು ಆ ಒಂದು ಹೆಮ್ಮೆ ನನಗೆ ಇದೆ. ಸಮಿತಿಯಿಂದ ನಾವು ತನಿಖೆಗೆ ಹೋದಾಗ ಯಾವ ರೀತಿಯ ಪ್ರತಿರೋಧ ಬರುತ್ತಿತ್ತು. ಪೊಲೀಸ್ ಪ್ರೊಟೆಕ್ಷನ್ ಇದ್ದರೂ ಕೂಡ ನಮ್ಮ ಮೇಲೆ ಹಲ್ಲೆ ಆಗುವಂಥ ಒಂದು ಸಾಧ್ಯತೆ ಇತ್ತು. ಅಂತಹ ಒಂದು ದುಸ್ಥಿತಿಯನ್ನು ಕೂಡ ಎದುರಿಸಿ 33,873 ಎಕರೆಯಷ್ಟು ಜಮೀನನ್ನು ಪತ್ತೆ ಹೆಚ್ಚುವಂಥದ್ದರಲ್ಲಿ ನಾನು ಯಶಸ್ಸನ್ನು ಪಡೆದಿದ್ದೇವೆ, ನಿಜವಾಗಿಯೂ ನನಗೆ ಅದರ ಬಗ್ಗೆ ಹೆಮ್ಮೆ ಇದೆ. ಆದರೆ ವಿಶೇಷವಾಗಿ ನಾವು ಅದರಲ್ಲಿ ಕಂಡುಕೊಂಡಂಥ ಸಂಗತಿ ಏನೆಂದರೆ, ದೇವಾಲಯಕ್ಕೆ ಸಂಬಂಧಪಟ್ಟಂಥ ಪ್ರಾಪರ್ಟಿಗಳು, ವಕ್ಫ್ ಬೋರ್ಡಿಗೆ ಸಂಬಂಧಪಟ್ಟಂಥ ಪ್ರಾಪರ್ಟಿಗಳು ಯಾವ ರೀತಿ ಆಕ್ರಮಣಗೊಂಡಿವೆ, ಅವುಗಳನ್ನು ಅಧಿಕೃತಗೊಳಿಸುವುದರಲ್ಲಿ ಏನೆಲ್ಲಾ ಪ್ರಯತ್ನಗಳು ಆಗಿವೆ, ಎಲ್ಲಾ ಕಡೆಗಳಲ್ಲಿ ಅಧಿಕಾರಿಗಳು ಶಾಮೀಲಾಗಿರುವಂಥದ್ದು. ಫೋರ್ಜರಿ ಡಾಕ್ಯುಮೆಂಟ್‌ಗಳನ್ನು ಮಾಡಿರುವಂಥದ್ದು. ಫೋರ್ಜರಿ ಡಾಕ್ಯುಮೆಂಟ್‌ಗಳನ್ನು ಮಾಡಿ ನ್ಯಾಯಾಲಯದಿಂದ protection

ತೆಗೆದುಕೊಳ್ಳುವಂಥ ಒಂದು ಪ್ರಯತ್ನವನ್ನು ಮಾಡಿದೆ. ಅದು ನಿಮ್ಮ ತನಿಖೆಗೆ ಅಡ್ಡಿಪಡಿಸುವಂಥದ್ದು. ಎಲ್ಲಾ ಕಡೆಗಳಲ್ಲಿ ನ್ಯಾಯಾಲಯದ ತಡೆಯಾಜ್ಞೆ ಇದೆ. ಅದಕ್ಕೋಸ್ಕರ ವಿಶೇಷ ನ್ಯಾಯಾಲಯಕ್ಕೆ ಅಲ್ಲಿ ಇರುವಂಥ ಎಲ್ಲಾ ಕೇಸ್‌ಗಳನ್ನು ರೆಫರ್ ಮಾಡಿ ಸಮಗ್ರವಾಗಿ ತನಿಖೆ ನಡೆಸಿದರೆ ಮಾತ್ರ ಇಲ್ಲಿ ನ್ಯಾಯವನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಸಾಮಾಜಿಕ ಅರಣ್ಯ ಇರುವಂಥ ಪ್ರದೇಶಗಳಲ್ಲಿ ಮತ್ತು ಸಿ.ಎ.ಸೈಟ್‌ಗಳಲ್ಲಿ ಯಾವ ರೀತಿಯಾಗಿ ಮಾಡಿದ್ದಾರೆಂದರೆ, ಕೇವಲ ಅವರಾಗಿ ಅದನ್ನು ಅಕ್ಯುಪೈ ಮಾಡಿಲ್ಲ. ಅಲ್ಲಿ ಸರ್ಕಾರದ ಒಂದು ಆಸ್ಪತ್ರೆಯನ್ನು ಕಟ್ಟಿಸುವುದಕ್ಕೆ ಒಂದು ವ್ಯವಸ್ಥೆಯನ್ನು ಮಾಡಿದ್ದಾರೆ. ಅಂದರೆ ತಾವು ಕೂಡ ಸೇಫ್ ಆಗಬೇಕೆನ್ನುವ ಹಿನ್ನೆಲೆಯಲ್ಲಿ ಪ್ರಯತ್ನವನ್ನು ಮಾಡಿ ಅದೆಲ್ಲವನ್ನು ಕಬ್ಜಾ ಮಾಡುವಂಥದ್ದು. ಪ್ರಮುಖವಾಗಿ ಅದನ್ನು ಕಮರ್ಷಿಯಲ್ಲಾಗಿ ಕನ್ವರ್ಟ್ ಮಾಡಿರುವಂಥದ್ದು ಅನೇಕ ಸಂಗತಿಗಳ ಬಗ್ಗೆ ಬೆಳಕು ಚೆಲ್ಲುವಂಥದ್ದು ಇದೆ. ಇದಕ್ಕೆ ವಿಶೇಷ ನ್ಯಾಯಾಲಯ ಮಾಡಿ ಬೇರೆ ನ್ಯಾಯಾಲಯಗಳಲ್ಲಿ ಎಲ್ಲೆಲ್ಲಿ ಏನು ತಡೆಯಾಜ್ಞೆಗಳು ಇದೆ ಅವುಗಳನ್ನು ರೆಫರ್ ಮಾಡುವುದಕ್ಕೆ ಏನಾದರೂ ಮಾಡಿದಲ್ಲಿ ಸಮಯ ನಿಗದಿತ ಆಧಾರ ದಲ್ಲಿ ಕೆಲಸ ಮಾಡುವುದಕ್ಕೆ ಆಗುತ್ತದೆ. ನಿವೃತ್ತ ಅಧಿಕಾರಿ ವಿ.ಬಾಲಸುಬ್ರಹ್ಮಣಿಯನ್‌ರವರ ಬಗ್ಗೆ ನನಗೆ ತುಂಬಾ ಹೆಮ್ಮೆ ಇದೆ, ಅವರು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅವರು ಒಳ್ಳೆಯ ಅಧ್ಯಕ್ಷರಾಗಿ ಕಾರ್ಯವನ್ನು ನಿರ್ವಹಿಸಬಹುದು. ಆದರೂ ಕೂಡ ನಾನು ಇದರ ಜೊತೆಯಲ್ಲಿ ಹೇಳುವಂಥದ್ದು ಮತ್ತು ಶಾಸಕರಿಗೆ ಸಂಬಂಧಪಟ್ಟಿದ್ದರಲ್ಲಿ ಕೂಡ ಇದರಲ್ಲಿ ಅದನ್ನು ಸೇರಿಸಿದರೆ ಇನ್ನೂ ಒಳ್ಳೆಯದು ಆಗಬಹುದು ಎನ್ನುವ ನನ್ನ ಅನಿಸಿಕೆಯನ್ನು ಕೂಡ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಇಲ್ಲಿಯೇ ಸಂಸದೀಯ ಸಚಿವರು ಇದ್ದೀರಿ, ಇವರು ನಿಮ್ಮ ಪ್ರಕಾರ ಫೈನಲ್ ವರದಿಯನ್ನು ಕೊಟ್ಟುಬಿಟ್ಟಿದ್ದಾರೆ. ನಾವು ಏನು ಇಂಟಿರಿಮ್ ವರದಿಯನ್ನು ಮಾತ್ರ ಕೊಟ್ಟಿದ್ದಾರೆಂದು ತಿಳಿದುಕೊಂಡಿದ್ದೆವು. ಆದರೆ ಮಧ್ಯದಲ್ಲಿ ಚುನಾವಣೆ ಬಂತು ಮಾಡಲಿಲ್ಲವೆಂದು we were under that impression. But according to statement of Government 21.9.2007 ರಲ್ಲಿ ಅಂತಿಮ ವರದಿಯನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ. As soon as report

is submitted to the Government, Government in turn ಇಲ್ಲಿ ಮಂಡಿಸಬೇಕಾಗಿತ್ತು. Because, House Committee ಕೊಟ್ಟಿರುವಂಥ report ಅದು. ವರದಿಯನ್ನು ಕೊಟ್ಟ ಮೇಲೆ ಸದನದ ಮುಂದೆ ಮಂಡಿಸದೇ ಒಂದು ವರ್ಷದಿಂದ ಏಕೆ ಇಟ್ಟುಕೊಂಡಿರುತ್ತೀರಿ? What made you to sleep over the matter? ಎರಡು ವರ್ಷವಾಯಿತು. ಅವರು 21.9.2007 ರಲ್ಲಿ ವರದಿಯನ್ನು ಕೊಟ್ಟಿರುತ್ತಾರೆ, ಎರಡು ವರ್ಷ ಆಗುವುದಕ್ಕೆ ನಾವು 7ನೇ ತಿಂಗಳಲ್ಲಿ ಇವತ್ತು ಇದ್ದೇವೆ. It amounts to breach of privilege of the House ಆಗುತ್ತದೆ. ಆಗಲೇ ಅವರು ಮಂಡಿಸಬೇಕಾಗಿತ್ತು. ಇವತ್ತಿಗೂ ಕೂಡ ಅವರು ಮಂಡಿಸಿರುವುದಿಲ್ಲ, ಅವರು statement ಮಾಡುವುದರ ಜೊತೆಯಲ್ಲಿ ಯಾದರೂ ವರದಿಯನ್ನು ಮಂಡಿಸಬೇಕಾಗಿತ್ತು. ನಾಳೆಯಾದರೂ ಕೂಡಲೇ this House is expected to know, ಅದನ್ನು ಮಂಡಿಸಲೇಬೇಕು. It is the privilege of this House, Committee of this House, and the Upper House. They have submitted the report ಅದನ್ನು ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಆ ವರದಿಯನ್ನು ನಾಳೆಯಾದರೂ ಸದನದಲ್ಲಿ ಮಂಡಿಸಬೇಕು. Before making a statement ಈಗಲೇ ಮಂಡಿಸ ಬೇಕಾಗಿತ್ತು. ನಾಳೆಯಾದರೂ ವರದಿಯನ್ನು ಸದನದಲ್ಲಿ ಮಂಡಿಸಬೇಕು. ಅದು ಈ ಸದನದ ಸ್ವತ್ತಾಗಬೇಕು.

ಶ್ರೀ ಟಿ.ಬಿ.ಜಯಚಂದ್ರ (ಶಿರಾ) : ಮಾನ್ಯ ಅಧ್ಯಕ್ಷರೆ, ಆ ವರದಿಯನ್ನು ಸದನದಲ್ಲಿ ಮಂಡಿಸದೆ ಅದು ಜಂಟಿ ಸದನ ಸಮಿತಿಯ ಒಂದು ವರದಿ, ಅದರ ಸಂರಕ್ಷಣೆಯ ಬಗ್ಗೆ ಒಂದು ಕಾರ್ಯಪಡೆ ತರುತ್ತೇವೆನ್ನುವ ಒಂದು ಹೇಳಿಕೆಯನ್ನು ತರುತ್ತಾರೆ. ಇದು ಏನು blackmailing tactics? ಇದರ ಅರ್ಥ ಏನು? ಎರಡು ವರ್ಷದಿಂದ report ನ್ನು place ಮಾಡದೆ ಈಗ ಅದನ್ನು ತಂದು ಕಾರ್ಯಪಡೆ ಮಾಡುತ್ತೇವೆಂದು ಹೇಳಿ, ನನಗೆ ಅನಿಸುತ್ತದೆ, ನೀವು ಕೊಟ್ಟಿರತಕ್ಕಂಥ ಹೇಳಿಕೆ ಕೂಡ ಏನು ಸಮಾಧಾನ ಕೊಡುವಂಥದ್ದಾ? ಇದರಲ್ಲಿ ನಾನಾ ರೀತಿಯಲ್ಲಿ ಅನುಮಾನಗಳು ಬರತಕ್ಕಂಥ ರೀತಿಯಲ್ಲಿ ಈ ವರದಿ ಇದೆ. ಈಗ 33,000 ಎಕರೆ ಜಮೀನನ್ನು ಗುರುತಿಸಿದ್ದೀರಿ, 9,000 ಎಕರೆ ಜಮೀನನ್ನು ಬಿಡಿಸಿಕೊಳ್ಳುತ್ತೇವೆಂದು ಹೇಳುತ್ತಿದ್ದೀರಿ, ಉಳಿದಿದ್ದನ್ನು ಅವರಿಗೆ ಬಿಟ್ಟುಕೊಟ್ಟಿದ್ದೀರಾ? ಅಲ್ಲಿರುವ ಅಧಿಕಾರಿಗಳು ಏನು ಮಾಡುತ್ತಿದ್ದಾರೆ.

ಇಲ್ಲಿಯವರೆಗೆ ಅದನ್ನು ಏಕೆ ಬಿಡಿಸಿಕೊಳ್ಳವುದಕ್ಕಾಗಿಲ್ಲ. Land records ನ್ನು update ಮಾಡತಕ್ಕಂಥದ್ದು ಕಂದಾಯ ಇಲಾಖೆ, ಫಾರೆಸ್ಟ್ ಇಲಾಖೆಯಲ್ಲಿ ರುವುದನ್ನು update ಮಾಡಿ ಅವರ ಮೇಲೆ ಏಕೆ ಕ್ರಿಮಿನಲ್ ಕೇಸ್ ಹಾಕಲಿಲ್ಲ. ಒಂದು ಸವಿಸ್ತಾರವಾದ ಉತ್ತರವನ್ನು ಕೊಡದೇ ನೀವು ರಿಪೋರ್ಟ್‌ನ್ನು ಪ್ಲೇಸ್ ಮಾಡದೆ ಇದಕ್ಕೆ ಕಾರ್ಯಪಡೆ ಮಾಡುತ್ತೇವೆಂದು ಹೇಳಿದರೆ ಇದು ಸರ್ಕಾರದ ಕೈಯಲ್ಲಿ ಬ್ಲಾಕ್‌ಮೇಲ್‌ಗೆ ಒಂದು ದೊಡ್ಡ ಅಸ್ತ್ರವಾಗುತ್ತದೆ, ಅದಕ್ಕೆ ಅವಕಾಶ ಆಗಬಾರದು.

ಶ್ರೀ ಎಸ್. ಸುರೇಶ್‌ಕುಮಾರ್ : ನಾನು ನಿಂತಾಗಲೆಲ್ಲಾ ನಾನು contradictory ಮಾಡುತ್ತೇನೆಂದು ತಿಳಿದುಕೊಳ್ಳಬೇಡಿ. ದಿನಾಂಕ:21.7.2009 ರಂದು ಅಂತಿಮ ವರದಿ ಸಲ್ಲಿಸಿದ್ದಾರೆ. ಇದು ಸತ್ಯ. ಅದು ಈ ಸದನದ ಸ್ವತ್ತು. ಇದನ್ನು ಸದನದ ಮುಂದೆ ಮಂಡಿಸುವುದಕ್ಕೆ ಮಾನ್ಯ ಸಭಾಧ್ಯಕ್ಷರಿಗೆ ನಾವು ಕಳುಹಿಸಿರುತ್ತೇವೆ. ತಮಗೆ ಗೊತ್ತಿರುವಂತೆ ದಿನಾಂಕ: 21.7.2009 ಆದ ಮೇಲೆ ಸದನ dissolve ಆಯಿತು. ಈಗ ಅದು ಸಭಾಧ್ಯಕ್ಷರ ಮುಂದೆ ಇದೆ. ಅದನ್ನು ಮಂಡಿಸುತ್ತೇವೆ.

ಶ್ರೀ ರೋಷನ್ ಬೇಗ್ : ಮಂಡಿಸಿ, you should have placed this earlier.

ಶ್ರೀ ಸಿದ್ದರಾಮಯ್ಯ : We want to know whether this report is submitted to the Speaker.

ಶ್ರೀ ಎಸ್. ಸುರೇಶ್‌ಕುಮಾರ್ : Yes.

ಶ್ರೀ ಸಿದ್ದರಾಮಯ್ಯ : In turn ನಿಮಗೆ ಸರ್ಕಾರಕ್ಕೆ ಬಂದಿದೆಯಾ?

ಶ್ರೀ ಎಸ್. ಸುರೇಶ್‌ಕುಮಾರ್ : ಇಲ್ಲ. ಮಾನ್ಯ ಸಭಾಧ್ಯಕ್ಷರಿಗೆ ಕೊಟ್ಟಿರುತ್ತೇವೆ.

ಶ್ರೀ ಸಿದ್ದರಾಮಯ್ಯ : ಹಾಗಾದರೆ ನೀವು ಹೇಗೆ ಈಗ statement ನ್ನು ಕೊಟ್ಟಿರುತ್ತೀರಿ? ವರದಿ ಬಂದಿದೆ ಎಂದು ನೀವು ಏಕೆ ಹೇಳಿದಿರಿ? It is the statement made by the Government, not by the Speaker.

ಶ್ರೀ ಎಸ್.ಸುರೇಶ್ ಕುಮಾರ್ : ಹೌದು, it is a statement of facts.

ಶ್ರೀ ಸಿದ್ದರಾಮಯ್ಯ : No. No. It is a different thing. ಆತುರ ಏಕೆ ನಿಮಗೆ ಹಾಗಾದರೆ? Why?

ಶ್ರೀ ಎಸ್.ಸುರೇಶ್‌ಕುಮಾರ್ : ದಿನಾಂಕ :21.9.07 ರಂದು ಎ.ಟಿ.ರಾಮಸ್ವಾಮಿಯವರು ವರದಿಯನ್ನು ಸಲ್ಲಿಸಿರುತ್ತಾರೆ. It is a statement of fact.

ಶ್ರೀ ಸಿದ್ದರಾಮಯ್ಯ : Ok. It is a fact. ನಿಮ್ಮ ಹತ್ತಿರ ಬಂದಿದೆಯಾ..

ಶ್ರೀ ಆರ್.ರೋಷನ್‌ಬೇಗ್ : Why it is not placed on the flor of the House?

ಶ್ರೀ ಸಿದ್ದರಾಮಯ್ಯ : ಇದು ನಿಮ್ಮ ಕೈಗೆ ಬಂದಿದೆಯಾ? I want to know that whether it is with the Government or not.

ಶ್ರೀ ಎಸ್.ಸುರೇಶ್‌ಕುಮಾರ್ : ಮಾನ್ಯ ಸಭಾಧ್ಯಕ್ಷರಿಗೆ ಕೊಡಲಾಗಿದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಸಭಾಧ್ಯಕ್ಷರ ಹತ್ತಿರ ಇದೆ.

ಶ್ರೀ ಎಸ್. ಸುರೇಶ್‌ಕುಮಾರ್ : ಹೌದು.

SRI SIDDARAMAIAH : I don't think so. Otherwise you would have not made this type of statement. I don't think. If it is with the Speaker, you would have not made this type of statement. It is not with the Speaker. Either, it is with the Government or report is not submitted. One could draw the inference like that. It is not that I am making the statement like that. I draw the inference like that. Whether it is submitted or it is not submitted. If it is with the Speaker, Speaker would have returned it back to the Government. ಕೊಟ್ಟಿರ ಬೇಕಾಗಿತ್ತಲ್ಲವೇ? ನೀವು ಕೊಡದೆ ಹೋಗಿದ್ದರೆ...

ಅಧ್ಯಕ್ಷರು : ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

SRI SIDDARAMAIAH : If it is with the Speaker how can you make a statement like this? See, it is with the Government, since you have not placed the report on the floor of the House, what inference one could draw? MLA ಬೇಕಾಗಿಲ್ಲ. Not we or you, any layman outside could draw the inferevce like this. 21.9.2007 ಆವತ್ತು ಇದ್ದಂಥ ಸ್ಪೀಕರ್‌ರವರಿಗೆ ಸಬ್‌ಮಿಟ್

ಮಾಡಿರುವಂಥದ್ದು. ಆಗ ಇವರು ಇರಲಿಲ್ಲ. ಅವರು ಇರಲಿಲ್ಲ, ನೀವು ಇರಲಿಲ್ಲ. ನೀವು ಬಂದು ಒಂದು ವರ್ಷವಾಗಿ ಎರಡು-ಮೂರು ತಿಂಗಳಾಯಿತು what were you doing? ಯಾರನ್ನು protect ಮಾಡುವುದಕ್ಕೆ ಮಾಡಿದ್ದೀರಿ, ಯಾರನ್ನು ರಕ್ಷಣೆ ಮಾಡುವುದಕ್ಕೆ ಇದನ್ನು ಮಾಡಿದ್ದೀರಿ?

ಯಾರಿಗೆ blackmail ಮಾಡುವುದಕ್ಕೆ ಮಾಡಿದ್ದೀರಿ, ಯಾರಿಗೆ ಟೋಪಿಯನ್ನು ಹಾಕುತ್ತಿದ್ದೀರಿ? ಇದರಲ್ಲಿ ಏನೇನು... my point is all these question arises. If you are keeping quite over the matter all these question arise.

ಶ್ರೀ ಎಸ್.ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, As an advocate Court ಗೆ ಬಹಳಷ್ಟು issues ಗಳನ್ನು frame ಮಾಡಿಮಾಡಿ ಕೊಟ್ಟಿರಬೇಕು ನೀವು.

ಶ್ರೀ ಸಿದ್ದರಾಮಯ್ಯ : ಹೌದು, ಮತ್ತೆ lawyer ಕೆಲಸವೇ ಅದು. Truth ಹೊರಗಡೆಗೆ ಬರಬೇಕಾದರೆ ಇವೆಲ್ಲವನ್ನು ಹೇಳಲೇಬೇಕಲ್ಲ? ನೀವು ಏಕೆ ಸತ್ಯವನ್ನು ಬಚ್ಚಿಡುತ್ತಿದ್ದೀರಿ ಹೇಳಿ? ಬಚ್ಚಿಟ್ಟಿದ್ದೀರಿ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಸಭಾಧ್ಯಕ್ಷರೆ, ಸದನ ಸಮಿತಿಯ ವರದಿ ತಮ್ಮ ಮುಂದೆ ಸಬ್‌ಮಿಟ್ ಆದಮೇಲೆ ಬಹಶಃ ಒಂದು ದಿವಸವೂ ಕೂಡ ನೀವು ಇಡುವುದಕ್ಕೆ ಸಾಧ್ಯವಿಲ್ಲ. ನಿಮಗೆ ವರದಿ ಬಂದ ತಕ್ಷಣ ನೀವು ಸರ್ಕಾರಕ್ಕೆ forward ಮಾಡುತ್ತೀರಿ.

ಅಧ್ಯಕ್ಷರು : ನಾನು ನಿಮಗೆ ಸಹಾಯವನ್ನು ಮಾಡುತ್ತೇನೆ. ನಾನು ಈ ಬಗ್ಗೆ clear ಮಾಡುತ್ತೇನೆ. ಜಂಟಿ ಸದನ ಸಮಿತಿಯು ಈ ಸದನದಲ್ಲಿ ನೇಮಕವಾಗಿರುವಂತಹದ್ದು. ಅವರು reportನ್ನು Speaker ರವರಿಗೆ ಕೊಡುತ್ತಾರೆ. ಏನು 2007ರಲ್ಲಿ ಅವರು ವರದಿಯನ್ನು ಕೊಟ್ಟಿದ್ದಾರೆ, ಹಿಂದೆ ಯಾರು Speaker ಇದ್ದರು, ಅದನ್ನು ಅವರ ಕಡೆಗೆ ಕೊಟ್ಟಿದ್ದಾರೆ. ಅದು ನಮ್ಮ Custody ಒಳಗಡೆಯೇ continue ಆಗಿರುತ್ತದೆ. ಹೀಗಾಗಿ ಅದನ್ನು verify ಮಾಡಿ ಅದನ್ನು ನಾನು ಸರ್ಕಾರಕ್ಕೆ ಕಳುಹಿಸಿಕೊಡುತ್ತೇನೆ.

SRI SIDDARAMAIAH : Speaker is also not aware of this. I do not know whether it is in the custody of the Speaker or not?

(ಗೊಂದಲ)

ಶ್ರೀ ರೋಷನ್ ಬೇಗ್ : ಅದನ್ನು ಎಲ್ಲಿ ಇಟ್ಟುಕೊಳ್ಳುತ್ತಾರೆ ಅದು ಗೊತ್ತಿಲ್ಲ ನಮಗೆ.

ಅಧ್ಯಕ್ಷರು : One minute..

ಶ್ರೀ ಎಸ್.ಸುರೇಶ್ ಕುಮಾರ್ : No, No.

ಶ್ರೀ ಸಿದ್ದರಾಮಯ್ಯ : He makes the statement. ಅವರು ಹೇಳುತ್ತಿರುವುದು. ಅದನ್ನು ಹೇಳುತ್ತಿರುವುದು ನಾನಲ್ಲ.

(ಗೊಂದಲ)

ಶ್ರೀ ಎಸ್.ಸುರೇಶ್‌ಕುಮಾರ್ : ಅವರು ಏನು ಹೇಳಿದರು.

(ಗೊಂದಲ)

ಶ್ರೀ ಎಸ್.ಸುರೇಶ್‌ಕುಮಾರ್ : ಮಾನ್ಯ ಸಿದ್ದರಾಮಯ್ಯನವರೆ, ನೀವು ಈ ಸ್ಥಾನದಲ್ಲಿದ್ದು ಈ ರೀತಿಯಾಗಿ ಮಾತನಾಡಬಾರದು.

(ಗೊಂದಲ)

ಶ್ರೀ ಎಸ್.ಸುರೇಶ್‌ಕುಮಾರ್ : please, hear him.

ಶ್ರೀ ಸಿದ್ದರಾಮಯ್ಯ : ನಾನು ಹೇಳಿರುವುದಿಲ್ಲ. I am sorry, ಅವರು ಹೇಳಿದ್ದಕ್ಕೆ ನಾನು ಹೇಳಿದ್ದೇನೆ.

(ಗೊಂದಲ)

ಅಧ್ಯಕ್ಷರು : ನಾನು Clear ಮಾಡಿ ಹೇಳುತ್ತೇನೆ.

ಶ್ರೀ ಎಸ್.ಸುರೇಶ್‌ಕುಮಾರ್ : Problem ಏನು ಗೊತ್ತಾ ಸಿದ್ದರಾಮಯ್ಯನವರೆ hearing ಗೆ, listening ಗೆ ವ್ಯತ್ಯಾಸ ಇದೆ.

ಶ್ರೀ ಸಿದ್ದರಾಮಯ್ಯ : O.K.

ಶ್ರೀ ಎಸ್. ಸುರೇಶ್‌ಕುಮಾರ್ : You won't listen. ಅದು problem. ಅವರು ಏನು ಹೇಳಿದರು.

ಶ್ರೀ ಸಿದ್ದರಾಮಯ್ಯ : O.K. O.K. ನಿಮ್ಮಷ್ಟು ನನಗೆ ಇಂಗ್ಲೀಷ್‌ನಲ್ಲಿ ಪ್ರೌಢಿಮೆ ಇಲ್ಲ. ಸ್ವಲ್ಪ ಸ್ವಲ್ಪ ಇದೆ. ಆಯಿತು ಹೇಳಿ.

ಶ್ರೀ ಎಸ್.ಸುರೇಶ್‌ಕುಮಾರ್ : ಅವರೇನು ಹೇಳಿವರು, ಹಿಂದೆ ನಾನು ಇರಲಿಲ್ಲ. ಹಿಂದಿನ Speaker ರವರ custody ಯಲ್ಲಿತ್ತು. ಈಗ ನನಗೆ ಬಂದಿದೆ. ನಾನು verify ಮಾಡಿ ಇಡುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಸಿದ್ದರಾಮಯ್ಯ : ಇಲ್ಲಾ, ಇಲ್ಲಾ.

(ಗೊಂದಲ)

ಅಧ್ಯಕ್ಷರು : ಅಲ್ಲಾ ನಾನು ಹೇಳಿದ್ದು...

ಶ್ರೀ ಸಿದ್ದರಾಮಯ್ಯ : ಅವರು ಏನು ಹೇಳಿದ್ದಾರೆಂದು...

ಶ್ರೀ ಹೆಚ್.ಸಿ.ಬಾಲಕೃಷ್ಣ : Speaker ರವರು ಬಂದು ಒಂದು ವರ್ಷವಾಯಿತು. ಒಂದು ತಿಂಗಳಾಗಿಲ್ಲ ಬಂದು.

ಶ್ರೀ ಸಿದ್ದರಾಮಯ್ಯ : ಹಿಂದೆ ಇದ್ದಂತಹ ಅಧ್ಯಕ್ಷರಿಗೆ ಕೊಟ್ಟಿರಬಹುದು.

ಶ್ರೀ ಎಸ್.ಸುರೇಶ್‌ಕುಮಾರ್ : ಕೊಟ್ಟಿರಬಹುದು ಅಲ್ಲಾ, ಕೊಟ್ಟಿದ್ದಾರೆ.

ಅಧ್ಯಕ್ಷರು : ಕೊಟ್ಟಿದ್ದಾರೆ.

ಶ್ರೀ ಸಿದ್ದರಾಮಯ್ಯ : ಆಯಿತು ಕೊಟ್ಟಿದ್ದಾರೆ.

ಅಧ್ಯಕ್ಷರು : ಈ ಬಗ್ಗೆ ಜಂಟಿ ಸದನ ಸಮಿತಿಯನ್ನು ನೇಮಕ ಮಾಡಿದ್ದು ಇದೇ ಸದನ. ಅದು Speaker ರವರಿಗೆ Submission ಆಗಬೇಕು.

ಶ್ರೀ ಸಿದ್ದರಾಮಯ್ಯ : ಇದು ನಮ್ಮ Custody ಯಲ್ಲಿಯೇ ಮುಂದುವರಿಯುತ್ತಿದೆ.

ಅಧ್ಯಕ್ಷರು : Yes.

ಶ್ರೀ ಸಿದ್ದರಾಮಯ್ಯ : ಅವರಿಂದ ನಮಗೆ ಗೊತ್ತಿಲ್ಲವೆಂದು ಹೇಳಿದ್ದಾರೆ ಅಲ್ಲವೇ?

ಅಧ್ಯಕ್ಷರು : ಅದನ್ನೇ ನಾನು ನೆನಪು ಮಾಡಿರುವುದು.

ಶ್ರೀ ಸಿದ್ದರಾಮಯ್ಯ : ಅವರು ಹೇಳಿರುವುದನ್ನೇ ನಾನು ಹೇಳುತ್ತಿರು ವುದು.

ಅಧ್ಯಕ್ಷರು : Yes.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳೆ ಒಂದೇ ಒಂದು ವಿಚಾರವನ್ನು ಹೇಳುತ್ತೇನೆ. ಈಗ ಹೇಳಿಕೆಯನ್ನು ಕೊಟ್ಟಿರುವವರು ಮಾನ್ಯ ಮುಖ್ಯಮಂತ್ರಿಗಳು ಸಭಾಧ್ಯಕ್ಷರಿಗೆ ವರದಿಯನ್ನು ಕೊಟ್ಟು ಅಲ್ಲಿಂದ Government ಗೆ forward ಆದ ಮೇಲೆ ಈಗಾಗಲೇ ಅದರಲ್ಲಿ ಒತ್ತುವರಿಯನ್ನು ತೆರವು ಮಾಡಿಸುವಂತಹ ಕೆಲಸವನ್ನು ಮಾಡಿದ್ದೀರಿ. ಇಷ್ಟೆಲ್ಲಾ ಸಮಗ್ರವಾದ ಹೇಳಿಕೆಯು ಮಾನ್ಯ ಮುಖ್ಯಮಂತ್ರಿಯ ವರಿಂದ ಬರುವಾಗ report ನಿಮ್ಮ ಕೈಯಲ್ಲಿ ಇಲ್ಲ ಎನ್ನುವಂತಹ ಪ್ರಶ್ನೆ ಇಲ್ಲ.

ಅಂದಾಗ ಒಂದು ಪ್ರಶ್ನೆ ಬರುತ್ತದೆ. ಎರಡು ವರ್ಷದವರೆಗೂ ಕೂಡ ಜಂಟಿ ಸದನ ಸಮಿತಿಯ ವರದಿಯನ್ನು ಏಕೆ ಇಡಲಿಲ್ಲ? ಇದು ಸಂಪೂರ್ಣವಾಗಿ ನಿಮ್ಮ ಕಂದಾಯ ಮಂತ್ರಿಗಳು ಇರಬಹುದು ಅಥವಾ ಯಾರೇ ಇರಬಹುದು...

(ಗೊಂದಲ)

ಶ್ರೀ ರೋಷನ್ ಬೇಗ್ : ಬರೀ ಟೋಪಿಯನ್ನು ಹಾಕುತ್ತಿದ್ದರು.

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, Unfortunately ಯಾವ ವರದಿ ಅದರ ಅನುಷ್ಠಾನ ಭೂಕಬಳಿಕೆಯನ್ನು ತಡೆಯುವುದು ಅಲ್ಲ ಚರ್ಚೆ ನಡೆಯುತ್ತಿರುವುದು, ಕಾನೂನು ಭಾಗ, ತುಂಬಾ ಸಂತೋಷ. ಮಧ್ಯಂತರ ವರದಿ ಎರಡನ್ನು House ನಲ್ಲಿ table ಮಾಡಿದ್ದೇವೆ. ಎರಡು ಮಧ್ಯಂತರ ವರದಿಯನ್ನು ಈ House ನಲ್ಲಿ table ಮಾಡಿ ಆಗಿದೆ. Final ವರದಿಯನ್ನು ಕೊಟ್ಟಿರುವುದನ್ನು ಅವತ್ತು Speaker ಗೆ ಆಗ ರಾಷ್ಟ್ರಪತಿಯವರಿಗೆ ಕೊಟ್ಟಂತಹ ಕಾಲ. ಅದು un-official ಆಗಿ ಕಾಪಿ ನಮ್ಮ ಹತ್ತಿರ ಇರಬಹುದು, ಅದು ಬೇರೆ ಪ್ರಶ್ನೆ. ಸನ್ಮಾನ್ಯ ಅಧ್ಯಕ್ಷರು ಇವತ್ತು ತಾವು ಗಮನಕ್ಕೆ ತಂದಿದ್ದೀರಿ. ಅವರ ಮೂಲಕವೇ ಈ ಮನೆಗೆ ಮಂಡನೆ ಆಗಬೇಕು. ಇದರಲ್ಲಿ ಏನು ಎರಡು ಮಾತಿಲ್ಲ. Un-official ಆಗಿ ಆ ಪ್ರತಿ ಬಂದಿರುವುದರಿಂದ ಅದರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ, ಆ ಬಗ್ಗೆ ಕೆಲಸವನ್ನು ಮಾಡುತ್ತಿದ್ದೇವೆ. Technical ಆಗಿ ನೀವು ಕೇಳುವ Point ಏನು? ಸನ್ಮಾನ್ಯ ಸಭಾಧ್ಯಕ್ಷರು, ಇಲ್ಲಿ ಮಂಡನೆ ಮಾಡಬೇಕೆಂದು. ಅವರು recordನ್ನು Verify ಮಾಡುತ್ತಾರೆ. ಅದು ಮಂಡನೆಯಾಗಿದೆಯೋ ಇಲ್ಲವೋ ಎಂದು ನೋಡುತ್ತಾರೆ, ಮಂಡನೆ ಮಾಡುತ್ತಾರೆ. ಅದೆಲ್ಲ ಪ್ರಶ್ನೆ. ಏಕೆ ನಿಧಾನ ವಾಗುತ್ತಿದೆ, ಇದನ್ನು ಮುಂದುವರಿಸುವುದು ಹೇಗೆ? at least ಸರ್ಕಾರ ಕಳಕಳಿಯಿಂದ ನಾವು ತತ್‌ಕ್ಷಣಕ್ಕೆ ಒಂದು ಸಮಿತಿಯನ್ನು ಮಾಡಿ ಒಬ್ಬ I.A.S. Officer ನ ಸಮಿತಿ ಮಾಡಿ ಇದು ಆದಷ್ಟು ಬೇಗ ಇಲ್ಲಿ ಏನಾಗಿದೆ ಎಂಬುವುದನ್ನು ತಿಳಿದುಕೊಳ್ಳುವಂತಹ ಪ್ರಯತ್ನವನ್ನು ಮಾಡಿ ಈ ಭೂಕಬಳಿಕೆ ನಿಷೇಧದ ಅಧಿನಿಯಮ ಇಲ್ಲಿ ಪಾಸ್ ಆಗಿದೆ. ರಾಷ್ಟ್ರಪತಿಗಳ ಅಂಕಿತಕ್ಕೆ ಹೋಗಿದೆ. ಒಂದು ವರ್ಷವಾದರೂ ಕೂಡ ಅನುಮೋದನೆಯಾಗಿ

ಬಂದಿರುವುದಿಲ್ಲ. ಒಂದು Special Court ಮಾಡುವುದಕ್ಕೂ ಕೂಡ ನಾವು ಹೊರಟಿದ್ದೇವೆ. ಅದರಲ್ಲಿ ನಾವು Provision ಮಾಡಿಕೊಂಡಿದ್ದೇವೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ...

ಶ್ರೀ ಬಿ.ಎಸ್.ಯಡಿಯೂರಪ್ಪ : ಒಂದು ನಿಮಿಷ ಸಾರ್, ನಾನು ನಿಂತಿದ್ದೇನೆ. ನನಗೆ ಓದುವುದಕ್ಕೆ ಬರುವುದಿಲ್ಲ ಸಾರ್. ನಾನು lawyer ಅಲ್ಲ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಹೇಳಿ ಮುಗಿಸಲಿ. ನಂತರ ನೀವು ಹೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ಸ್ವಲ್ಪ ಹೊತ್ತು ತಾವು ಕುಳಿತುಕೊಳ್ಳಿ. ಆ ಮೇಲೆ ತಾವು ಓದುವಿರಂತೆ.

ಶ್ರೀ ಸಿದ್ದರಾಮಯ್ಯ : ಅದು ಬರುತ್ತದೆಯೇ ಇಲ್ಲವೂ legal ಆಗಿ ಎಂದು ನೋಡಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ : ಹೌದು ಸ್ವಾಮಿ. ಯಾರು ಬೇಡವೆನ್ನುತ್ತಾರೆ Kaul & Shakdhar, law, ಕಾನೂನು ಪುಸ್ತಕ ಇವೆಲ್ಲವನ್ನು ಓದಿಯೇ ಇವತ್ತು ಈ ದೇಶ ಈ ಸ್ಥಿತಿಗೆ ಬಂದಿರುವುದು.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ನನಗೆ ಪೂರ್ತಿ ಮಾತನಾಡುವುದಕ್ಕೆ ಬಿಡಿ. ಈ experts ಎಂದು ಹೇಳಿ ಈ ಕಾನೂನು ತಜ್ಞರು ಏನು ಇದ್ದಾರೆ, ಇದರಿಂದ ನಿಮ್ಮಿಂದ ಏನೇನು ತಿಳಿದುಕೊಳ್ಳಬಹುದು, ಅದನ್ನು ತಿಳಿದುಕೊಳ್ಳು ವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ.

ನಾನು ಈ ಮನೆಯಲ್ಲಿ ಹೇಳುತ್ತಿರುವುದು ಎರಡು report ನ್ನು ಇಲ್ಲಿ ಇಟ್ಟಿದ್ದೇವೆ. ಅವತ್ತಿನ ಸನ್ಮಾನ್ಯ ಅಧ್ಯಕ್ಷರಿಗೆ ಆ ಸಮಿತಿಯವರು final report ನ್ನು ಕೊಟ್ಟಿದ್ದಾರೆ. ಅದನ್ನು ರಾಜ್ಯಪಾಲರಿಗೆ ಕಳುಹಿಸಿಕೊಟ್ಟರು. ಅವರಿಗೂ ಕೊಟ್ಟಿದ್ದಾರೆ. ನಮಗೂ ಕೂಡ Un-official ಆಗಿ ಕಾಪಿ ಸಿಕ್ಕಿದೆ, ಬಂದು ಕೊಟ್ಟು ಹೋಗಿದ್ದಾರೆ. ಆ ಹಿನ್ನೆಲೆಯಲ್ಲಿ ಇವತ್ತು ಚರ್ಚೆಯಾಗುತ್ತಿದೆ. ತಾವು ಎತ್ತಿರು ವಂತಹ ಈ ಪ್ರಶ್ನೆಯ ಬಗ್ಗೆ ಸನ್ಮಾನ್ಯ ಅಧ್ಯಕ್ಷರು verify ಮಾಡಿ ಅದು ಇನ್ನು ಸದನದಲ್ಲಿ ಮಂಡನೆ ಮಾಡದೆ ಇದ್ದರೆ ಮಂಡನೆ ಮಾಡಿ ಎಂದು request ಮಾಡಿಕೊಳ್ಳೋಣ. ಏನು ಅನಾಹುತವಾಗಿದೆ, ಏನು ಆಘಾತವಾಗಿದೆ ಪ್ರಶ್ನೆ ಏನು, ನಾವು ಕಳಕಳಿಯಿಂದ ಭೂಕಬಳಿಕೆ ನಿಷೇಧ

ಅಧಿನಿಯಮ ಇಲ್ಲಿ ಪಾಸ್ ಆಗಿದೆ. ರಾಷ್ಟ್ರಪತಿಯವರ ಅಂಕಿತಕ್ಕೆ ಕಳುಹಿಸಿ ಒಂದು ವರ್ಷವಾಗಿದೆ. ಅಲ್ಲಿಗೆ ಹೋಗಿ ವಿನಂತಿಯನ್ನು ಮಾಡಿ ವಾಪಸ್ಸು ತರಿಸೋಣ. ಅದರಲ್ಲಿ ನಾವು special court ಮಾಡುವುದಕ್ಕೂ ಕೂಡ Provision ಮಾಡಿದ್ದೇವೆ. ಮಾನ್ಯ ರೋಷನ್‌ಬೇಗ್‌ರವರೆ, ಒಟ್ಟಿನಲ್ಲಿ ಇವೆಲ್ಲಾ ಹಗರಣಗಳು ಬಯಲಾಗಬೇಕು ಎಂಬುದು ನಮ್ಮ ಸದುದ್ದೇಶವಿದೆ. ನೀವೆಲ್ಲರೂ ಅದರಲ್ಲಿ ಸದಸ್ಯರುಗಳಾಗಿದ್ದೀರಿ, ಅಲ್ಲಿ ಕೆಲಸವನ್ನು ಮಾಡಿದ್ದೀರಿ. ಅದರ ಮೇಲೆ ತಾವು ಬೆಳಕನ್ನು ಚೆಲ್ಲಿ. ಯಾರಿಗೆ ಕೊಟ್ಟೆವು ಏನು ಎಂದು ಹೇಳಿ.

ಶ್ರೀ ಆರ್. ರೋಷನ್‌ಬೇಗ್ : ನನ್ನ ಮೇಲೆ ಎಷ್ಟು ಒತ್ತಡವಿದ್ದರೂ ಕೂಡ ನಾನು ಆ ಸಮಿತಿಯಲ್ಲಿ Continue ಮಾಡಿದೆ. ಇವತ್ತಿನ ದಿವಸ ಅವರು report ನ್ನೇ ಕೊಟ್ಟಿರುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಇದು ನಿಮ್ಮ ಗಮನಕ್ಕೆ ಇರಲಿ ಏಕೆಂದರೆ, ಇಂತಹ ಸನ್ನಿವೇಶದಲ್ಲಿ ಏನು ಮಾಡಬೇಕೆಂಬುದು ಬಹಳ ಸ್ಪಷ್ಟವಾಗಿ Practice and procedure of parliament ನಲ್ಲಿದೆ "Where a report is Completed by committee when the House is not in session, is presented by its Chairman to the Speaker and before its presentation to the House in the next session, Loksabha is dissolved, the report is laid by the secretary General on the table of the House at the first convenient opportunity". Now, they are taking the defence. ಅವರು ವರದಿಯನ್ನು ಕೊಟ್ಟು ಎರಡು ವರ್ಷಗಳು ಆಗುತ್ತಾ ಬಂತು. House dissolve ಆಗಿ ಹೊಸ House Constitute ಆಗಿ ಇವರು ಅಧಿಕಾರಕ್ಕೆ ಬಂದು ಒಂದು ವರ್ಷದ ಮೇಲಾಯಿತು. ಇದು first opportunity ನಾ ಇವರಿಗೆ. This is not the first opportunity. You had tow more opportunities. ಏಕೆ ಮಾಡಲಿಲ್ಲಾ? Why? That is our question. ಕೇಳಿದರೆ ಒಂದು ಸಾರಿ ಕಾನೂನು ಪ್ರಕಾರ ಮಾಡಬೇಕೆಂದು ಹೇಳುತ್ತೀರಿ. ಇಲ್ಲಾ, ಎಂದು ರೂಲ್ಸ್ ಪುಸ್ತಕವನ್ನು ಓದುತ್ತೀರಿ. No.No.It is not my point My objection is...

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು) : ಹಿಂದೆ ಕೃಷ್ಣರವರು Speaker ಆಗಿದ್ದರು. ಸನ್ಮಾನ್ಯ ಜಗದೀಶ್‌ಶೆಟ್ಟರ್‌ರವರು Speaker ಆದಮೇಲೆ ಆದದ್ದು ಅಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : ನಾನು ಅದನ್ನೇ ಓದುತ್ತಿರುವುದು.

ಶ್ರೀ ಬಿ.ಎಸ್.ಯಡಿಯೂರಪ್ಪ : ಇವರು Speaker ಆದ ಮೇಲೆ ಆಗಿರುವುದಲ್ಲಾ. ಅದರ ಬಗ್ಗೆ...

ಶ್ರೀ ಸಿದ್ದರಾಮಯ್ಯ : ನೀವು ಇದನ್ನು ಓದಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ನಾನು ಪುಸ್ತಕವನ್ನು ನೋಡಿದ್ದೇನೆ.

ಶ್ರೀ ಸಿದ್ದರಾಮಯ್ಯ : ನೀವು ಓದಿ ಬಂದಿರುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : ನಾನು ಓದಿದ್ದೇನೆ. ಓದಿದ್ದೇನೆ, ಓದಿಯೇ ಹೇಳುತ್ತಿರುವುದು.

ಶ್ರೀ ಸಿದ್ದರಾಮಯ್ಯ : ಹೌದಾ, ಅದು ಹೇಗೆ ಬಂತು? ನಿಮಗೆ Un-official ಆಗಿ report.

ಶ್ರೀ ಬಿ.ಎಸ್.ಯಡಿಯೂರಪ್ಪ : ಯಾವುದರ ಬಗ್ಗೆ ಇಲ್ಲಿ ಚರ್ಚೆ ಮಾಡಬೇಕು. ಯಾವುದಕ್ಕೆ ಸಮಯವನ್ನು ಕಳೆಯಬೇಕು.

ಶ್ರೀ ಸಿದ್ದರಾಮಯ್ಯ : ನೀವು ಹೇಳಿದ್ದು ಮಾತ್ರ ನಾವು ಚರ್ಚೆಯನ್ನು ಮಾಡಬೇಕು. ಏನು ತಪ್ಪು ಮಾಡಿದರು ಹೇಳಬಾರದು.

ಶ್ರೀ ಬಿ.ಎಸ್.ಯಡಿಯೂರಪ್ಪ : ತಪ್ಪನ್ನು ನಾವು ಮಾಡಿರುವುದಿಲ್ಲ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಈ ರಾಜ್ಯದ ಜನತೆಗೆ ನ್ಯಾಯವನ್ನು ಒದಗಿಸಿಕೊಡೋಣ. ಯಾರ ಕಾಲದಲ್ಲಿ ಯಾರು ನುಂಗಿದ್ದಾರೋ ನನಗೆ ಗೊತ್ತಿದೆ...

(ಗೊಂದಲ)

ನಾನು ಬಹಿರಂಗ ಮಾಡುವುದಕ್ಕೆ ಹೊರಟಿದ್ದೇನೆ, ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಹೊರಟಿದ್ದೇನೆ. ತಾವು appreciate ಮಾಡಬೇಕು.

ಅಧ್ಯಕ್ಷರು : ಮಾನ್ಯ ಸಿದ್ದರಾಮಯ್ಯನವರೆ,...

SRI SIDDARAMAIAH : You tell me how many officers you have booked? ಯಾರು encroach ಮಾಡಿದ್ದಾರೆ ಅವರ

ಮೇಲೆ ಎಷ್ಟು ಕ್ರಮವನ್ನು ತೆಗೆದುಕೊಂಡಿದ್ದೀರಿ? ನೀವು ಅಧಿಕಾರಕ್ಕೆ ಬಂದು ಎರಡು ವರ್ಷಗಳು ಆಗಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಅದಕ್ಕೆ ನಾನು ಒಂದು ಮಾತನ್ನು ಹೇಳಿದ್ದೇನೆ. ಇದು ಬಹಳ important. ಈ ಬಗ್ಗೆ ಚರ್ಚೆಯನ್ನು ಮಾಡೋಣ. ನಾನು ಏನೆಂದು ಹೇಳಿದೆ, ಒಬ್ಬ ಒಳ್ಳೆಯ retired officerನ್ನು ಹಾಕಿದ್ದೇನೆ. ಮಾನ್ಯ ರೋಷನ್‌ಬೇಗ್‌ರವರೆ, ನೀವು ಸ್ವಾಗತ ಮಾಡಿದ್ದೀರಾ.

ಶ್ರೀ ಸಿದ್ದರಾಮಯ್ಯ : ಅವರು ಸ್ವಾಗತ ಮಾಡಿದ್ದಾರಲ್ಲಾ.

ಶ್ರೀ ಬಿ.ಎಸ್.ಯಡಿಯೂರಪ್ಪ: ಪ್ರತಿ 3 ತಿಂಗಳಿಗೊಮ್ಮೆ ಈ ಮಾಹಿತಿ ಇರುವಂತಹ ಸಮಿತಿಯಲ್ಲಿದ್ದಂತಹ ಸದಸ್ಯರನ್ನು ಸಹ ನಾನು ಕರೆಯುತ್ತೇನೆ. ಪ್ರತಿಪಕ್ಷದ ನಾಯಕರನ್ನು ಸಹ ಕರೆಯುತ್ತೇನೆ. ಕಬಳಿಕೆಯಾಗಿರುವಂತಹ ಜಮೀನಿನ ಬಗ್ಗೆ ಮುಂದೆ ಏನು ಮಾಡಬೇಕು, ಆ ಪ್ರಭಾವಿ ವ್ಯಕ್ತಿಗಳ ಬಗ್ಗೆ ಏನು ಮಾಡಬೇಕು, ಈಗಾಗಲೇ ಹರಾಜು ಆಗಿರುವಂತಹ ಅವರೇ ವಶಪಡಿಸಿಕೊಳ್ಳುವಂತಹ ಪ್ರಯತ್ನವನ್ನು ನಡೆಸುತ್ತಿದ್ದಾರೆ. ಅದು ಆಗದ ಹಾಗೆ ನೋಡಿಕೊಳ್ಳುವುದರ ಬಗ್ಗೆ ಏನು ಮಾಡಬೇಕು. ಇದೆಲ್ಲವನ್ನು ಸಮಿತಿಯ ಮುಂದೆ ಸಲಹೆಯನ್ನು ಕೊಟ್ಟು ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅದಕ್ಕೆ ಬಿಗಿ ತಂದು ಈ ಕಬಳಿಕೆಯಾಗಿರುವಂತಹ ಭೂಮಿಯನ್ನು ಕೊನೆ ಮಾಡುವಂತಹದ್ದು. ಇದು ಕೇವಲ ಬೆಂಗಳೂರು ಅಲ್ಲ. ಈ ರಾಜ್ಯದ ಎಲ್ಲಾ ಕಡೆಗಳಲ್ಲಿಯೂ ಸರ್ಕಾರಿ ಭೂಮಿಯು ಒತ್ತುವರಿಯಾಗಿದೆ. ಇದನ್ನು ಸಮಗ್ರವಾಗಿ ಮಾಡುವುದಕ್ಕೋಸ್ಕರವಾಗಿ ಈ ಸಮಿತಿಯನ್ನು ನಾನು ಮಾಡಿದ್ದೇನೆ. ಇದಕ್ಕೆ ನಿಮ್ಮ ಪೂರ್ಣ ಸಹಕಾರ ಬೇಕು. ಆಗ ಮೀಟಿಂಗ್ ಮಾಡೋಣವೆಂದು ಹೇಳಿದೆ. Actually ಸನ್ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳು Statement ಮಾಡಿದ ಮೇಲೆ ಚರ್ಚೆ ತಕ್ಷಣ ಪ್ರಾರಂಭವಾಗುವುದಿಲ್ಲ. ಅದನ್ನು ನೀವು ಹೇಳುತ್ತಿದ್ದೀರಿ, ಅದಕ್ಕೋಸ್ಕರ ನಾವು ಚರ್ಚೆಯಲ್ಲಿ ಭಾಗವಹಿಸುತ್ತಿದ್ದೇವೆ. ನಮ್ಮ Revenue Minister ರವರು ಕೆಲವು ಮಾಹಿತಿಗಳನ್ನು ಕೊಡುತ್ತಾರೆ. ಸಭಾಧ್ಯಕ್ಷರು ಹಿಂದಿನವರು ಇಟ್ಟರೋ ಇಲ್ಲವೋ ಎನ್ನುವುದಕ್ಕೆ ಹೆಚ್ಚು ಮಹತ್ವವನ್ನು ಕೊಡದೆಯೇ ಬೇಕಾದರೆ verify ಮಾಡಿಯೇ ಅವರು ಏನು ಮಾಡಬೇಕೆಂದು ಮಾಡುತ್ತಾರೆ. ನೀವು ಸರ್ಕಾರದ ಗಮನಕ್ಕೆ ತಂದಿದ್ದೀರಿ. ಇದನ್ನು Speaker ಗಮನಕ್ಕೂ ಕೂಡ ತಂದಿದ್ದೀರಿ. ಅದನ್ನು ಅಲ್ಲಿಗೆ ಬಿಟ್ಟು ಮುಂದಿನ ವಿಷಯವನ್ನು ಚರ್ಚೆ

ಮಾಡಿ. ಇಲ್ಲಿ ನಾನೇನು ಮುಚ್ಚುಮರೆ ಮಾಡುವುದು ಏನಿದೆ? ನಾನು ಏಕೆ ಮುಚ್ಚಿಹಾಕುವುದಕ್ಕೆ ಹೋಗುತ್ತೇನೆ.

ಶ್ರೀ ಸಿದ್ದರಾಮಯ್ಯ : ನಮ್ಮದು ಎಲ್ಲಾ co-operation ಇದೆ.

ಶ್ರೀ ಬಿ.ಎಸ್.ಯಡಿಯೂರಪ್ಪ : Why should I hide anything?

ಶ್ರೀ ಸಿದ್ದರಾಮಯ್ಯ : ನೀವು ಕಳ್ಳರೆಲ್ಲರನ್ನು ಬಲಿ ಹಾಕುವುದಕ್ಕೆ ನಮ್ಮ ಎಲ್ಲಾ Co-operation ಬೇಕಾಗಿರುವುದು.

ಶ್ರೀ ಬಿ.ಎಸ್.ಯಡಿಯೂರಪ್ಪ : I am ready with you.

ಶ್ರೀ ಸಿದ್ದರಾಮಯ್ಯ : ನಮ್ಮದು ಪೂರಾ Co-operation ಇದೆ. ನೀವು ಯಾರನ್ನು ಬೇಕಾದರೂ ಬಲಿ ಹಾಕಿ. ಕಾನೂನು ಪ್ರಕಾರವಾಗಿ ಬಲಿಹಾಕಿ. I have no objection.

ಶ್ರೀ ಆರ್.ರೋಷನ್‌ಬೇಗ್ : ಈ ರಾಜ್ಯದಲ್ಲಿ ಯಾರು ಮಂತ್ರಿಗಳಿದ್ದಾರೆ, ಈ ರಾಜ್ಯದಲ್ಲಿ ಯಾರು ಶಾಸಕರಾಗಿದ್ದಾರೆ, ಅವರದ್ದೆಲ್ಲಾ ಬೆಂಗಳೂರು ನಗರದ ವಿಮಾನ ನಿಲ್ದಾಣದ ಸುತ್ತಮುತ್ತ ನೂರಾರು ಎಕರೆ ಜಾಗಗಳಲ್ಲಿ ಜಮೀನುಗಳಿವೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು) : ನೀವು ಒಂದು ಪ್ರಶ್ನೆಯನ್ನು ಕೇಳಿದಿರಿ, ಈ ಸಮಿತಿ ಏನು ಮಾಡುತ್ತದೆ? ವರದಿ ಮೇಲೆ ಕ್ರಮವೆಂದರೆ ಒತ್ತುವರಿಯಾದಂಥ ಪೂರ್ತಿ ಜಮೀನನ್ನು ಸರ್ಕಾರದ ವಶಪಡಿಸಿಕೊಳ್ಳುವುದು ಸೇರಿದೆ. ಒತ್ತುವರಿಯನ್ನು ತೆರವು ಮಾಡಿದ ನಂತರ ಸದರಿ ಜಮೀನನ್ನು ರಕ್ಷಿಸುವುದು ಮತ್ತು ಅಭಿವೃದ್ಧಿಪಡಿಸುವುದು ಸೇರಿದೆ. ಯಾವುದನ್ನು ಹೇಗೆ ಉಪಯೋಗ ಮಾಡಿಕೊಳ್ಳಬೇಕು ಎಂಬುದನ್ನು ಸಮಗ್ರವಾಗಿ ಚಿಂತನೆ ಮಾಡೋಣ. ಇದಲ್ಲದೆ ಇಲ್ಲಿ ಆಡಳಿತ ನಡೆಸಿದಂಥ ನಿಮಗೆ ಎಲ್ಲೆಲ್ಲಿ ಯಾವ್ಯಾವ ಪ್ರಭಾವಿಗಳು ಒತ್ತುವರಿ ಮಾಡಿಕೊಂಡಿದ್ದಾರೆಂದು ಮೇಲ್ನೋಟಕ್ಕೆ ಯಾರ್‍ಯಾರೋ ಬೇನಾಮಿ ಹೆಸರಿನಲ್ಲಿ ಆಸ್ತಿಪಾಸ್ತಿ ಮಾಡಿ ಕೊಂಡಿದ್ದಾರೆ. ಅದರಿಂದ ಬರುವ ಹಣದಿಂದಲೇ ಬಹಶಃ ಒಂದು ವರ್ಷ ಸರ್ಕಾರ ಆಡಳಿತ ನಡೆಸಬಹುದು. ಆ ಜಮೀನನ್ನೆಲ್ಲಾ ವಶಪಡಿಸಿಕೊಂಡರೆ ಅಷ್ಟು ದುಡ್ಡಾಗುತ್ತದೆ. ದಯಮಾಡಿ ಮಾಹಿತಿ ಕೊಡಿ, ಯಾರಾದರೂ ಒಬ್ಬನಿಗೆ ಈ ಯಡಿಯೂರಪ್ಪ ರಕ್ಷಣೆ ಮಾಡಿದಂಥ ಒಂದು ಉದಾಹರಣೆ ನಿಮಗೆ ಸಿಕ್ಕಿದರೆ ನಾನು ಅವತ್ತು ನಿಮಗೆ ಉತ್ತರ ಕೊಡುತ್ತೇನೆ. ಯಾರನ್ನೂ ಇಲ್ಲಿ

spare ಮಾಡುವುದಿಲ್ಲ, anybody, ಎಷ್ಟೇ ದೊಡ್ಡವನಿರಲಿ. ರೋಷನ್‌ಬೇಗ್ ರವರ ಹತ್ತಿರ ದೊಡ್ಡ ಮಾಹಿತಿಯೇ ಇದೆ, ನಮ್ಮ ದೇವನಹಳ್ಳಿಯ ಬಳಿ ಲಾರಿಯಲ್ಲಿ ತುಂಬಿಕೊಡು ಹೋದರು ಎಂದು ರೇವಣ್ಣನವರು ಮಾತನಾಡುವಾಗ ಹೇಳಿದರು. ಸ್ವಾಮಿ, ಹಿಂದೆ ದಾಖಲೆಗಳನ್ನೆಲ್ಲ ತೆಗೆದುಕೊಂಡು ಹೋಗಿ ಯಾರ್ಯಾರೊ ಮನೆಯಲ್ಲಿಟ್ಟು ಕೊಂಡು dispose ಮಾಡುತ್ತಿದ್ದುದನ್ನು ನಾನು ಕೇಳಿದ್ದೇನೆ. ಹಿಂದೆ ಅಧಿಕಾರದಲ್ಲಿದ್ದವರು ಕಡತಗಳನ್ನು ಎಲ್ಲೆಲ್ಲೋ ತೆಗೆದು ಕೊಂಡು ಹೋಗಿ dispose ಮಾಡುತ್ತಿದ್ದುದನ್ನು ನನ್ನ ಕಿವಿಯಲ್ಲಿ ಕೇಳಿದ್ದೇನೆ. ನನಗೇನೂ ಅನುಭವವಿಲ್ಲ. ಒಂದು ನಿಮಿಷ ಕೇಳಿ. ರೇವಣ್ಣ ಒಂದು ನಿಮಿಷ ಕೇಳಿ. ಆ ದೇವನಹಳ್ಳಿಯ ಸುತ್ತ ಮುತ್ತಲಿನದು ಯಾರ್ಯಾರು ತೆಗೆದುಕೊಂಡು ಹೋದರು ಎಂಬ ಬಗ್ಗೆ ನಮಗೆ ಮಾಹಿತಿಕೊಡಿ, ನಾಳೆ ಅವರನ್ನು ಜೈಲಿಗೆ ಹಾಕಿಸುತ್ತೇನೆ. ಏನಾದರೂ ಮಾಹಿತಿ ಇದ್ದರೆ ಕೊಡಿ ನಾನು ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಿ ಕ್ರಮ ತೆಗೆದುಕೊಳ್ಳುತ್ತೇನೆ. ನಿಮಗೆ ಬಹಳ ಸ್ಪಷ್ಟವಾಗಿ ತಿಳಿದಿರುವಂತೆ ದೇವನಹಳ್ಳಿಗೆ ಸಂಬಂಧಪಟ್ಟಂತೆ ಲಾರಿಗಳಲ್ಲಿ ತೆಗೆದುಕೊಂಡು ಹೋಗಿದ್ದಾರೆ ಎಂದು ಹೇಳಿದ್ದೀರಿ, ಲಾರಿಗಳಲ್ಲಿ ಇಲ್ಲದಿದ್ದರೆ ಜೀಪ್‌ಗಳಲ್ಲಿ ತೆಗೆದುಕೊಂಡು ಹೋಗಿರಲಿ, ಅದನ್ನು ನಮ್ಮ ಅಧಿಕಾರಿಗಳು ಹೇಳಿರಬೇಕು. ನನಗಿಂತ ಅಂದರೆ ಮುಖ್ಯಮಂತ್ರಿಗಿಂತ ಹೆಚ್ಚಾಗಿ ನಿಮಗೆ ಮಾಹಿತಿ ಕೊಡುವಂಥ ನಮ್ಮ ಅಧಿಕಾರಿಗಳಿದ್ದಾರೆ. ಆ ಮಾಹಿತಿ ನನಗೆ ಕೊಡಿ, immediate ಆಗಿ seize ಮಾಡಿಸುತ್ತೇನೆ. ಅವರನ್ನು ಜೈಲಿಗೆ ಕಳುಹಿಸುತ್ತೇನೆ, ಆ ವಿಷಯವನ್ನು ಇಲ್ಲೇ ಚರ್ಚೆ ಮಾಡೋಣ. ನಾನು ಆಗ ಯಾರನ್ನಾದರೂ spare ಮಾಡಿದರೆ ಕೇಳಿ. ಈ ಭೂಕಬಳಿಕೆಯಲ್ಲಿ ಅಧಿಕಾರಿ ಸೇರಿದ್ದರೆ ಅವರ ಮೇಲೂ ಕ್ರಮ ತೆಗೆದುಕೊಳ್ಳೋಣ. ಯಾರನ್ನೂ ಬಿಡಲಿಕ್ಕೆ ಬರುವುದಿಲ್ಲ. ಅಧಿಕಾರಿಗಳನ್ನು ಅಡ್ಡದಾರಿಗೆ ಹಿಡಿಸಿದವರು ಈ ರಾಜಕಾರಣಿಗಳೇ ತಾನೆ? ಅಧಿಕಾರದಲ್ಲಿರುವಂಥವರು ತಾನೇ? ಅದಕ್ಕೋಸ್ಕರ ಯಾರನ್ನೂ ನಾನು ಬಿಡುತ್ತೇನೆಂದು ಹೇಳಿಯೇ ಇಲ್ಲವಲ್ಲ.

Sri SIDDARAMAIAH : You can take any action under law. You send any body to jail.

ಶ್ರೀ ಬಿ.ಎಸ್.ಯಡಿಯೂರಪ್ಪ : ರೇವಣ್ಣನವರು ಹೇಳಿದ್ದು, ದೇವನಹಳ್ಳಿಯ ಬಳಿ ಲಾರಿಗಳಲ್ಲಿ ಯಾರ್ಯಾರು ದಾಖಲೆಗಳನ್ನು ತೆಗೆದು ಕೊಂಡು ಹೋದರು, ಇದರ ಬಗ್ಗೆ ದಯಮಾಡಿ ಇಲ್ಲಿ ಚರ್ಚೆ ಮಾಡಿದರೆ

ಈಗಲೇ ಈ ಸದನವನ್ನು ಮುಂದೂಡಿ ಈಗಲೇ ಅದನ್ನು seize ಮಾಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳೋಣ. ಮಾಹಿತಿಯನ್ನು ಏಕೆ ಮುಚ್ಚಿಡುತ್ತೀರಿ, ರಾಜ್ಯದ ಹಿತದೃಷ್ಟಿಯಿಂದ ದಯಮಾಡಿ ನನಗೆ ಹೇಳಿ. ನನ್ನ ಹತ್ತಿರ ಮಾಹಿತಿ ಇಲ್ಲ. ನಿಮ್ಮ ಹತ್ತಿರ ಮಾಹಿತಿ ಇದ್ದರೆ ಕೊಡಿ, ಕ್ರಮ ತೆಗೆದುಕೊಳ್ಳೋಣ.

(ಗೊಂದಲ)

ಅಧ್ಯಕ್ಷರು : ಈ ವಿಷಯದ ಬಗ್ಗೆ ಚರ್ಚೆ ಸಾಕು. ಈಗ 1.30 ಗಂಟೆ ಆಯಿತು, ಇನ್ನು ಎಷ್ಟು ಮಾತನಾಡುತ್ತೀರಿ, ಸಮಸ್ಯೆ ಬಗ್ಗೆ ಚರ್ಚೆ ಮಾಡುವುದು, ಬಿಟ್ಟುಬಿಡುವುದು, ಅಷ್ಟೆ. ನಾನೇನು ಮಾಡಲಿ. ಇಲ್ಲಿಗೆ ಚರ್ಚೆ ಸಾಕು. ಬೇರೆ ವಿಷಯ ತೆಗೆದುಕೊಳ್ಳೋಣ.

ಡಾ: ಹೆಚ್.ಸಿ.ಮಹದೇವಪ್ಪ (ಟಿ.ನರಸೀಪುರ) : ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಈ ರಾಜ್ಯದಲ್ಲಿ ಯಾರ್ಯಾರು ಬೇನಾಮಿ ಆಸ್ತಿ ಮಾಡಿದ್ದಾರೆ, ಅವರನ್ನೆಲ್ಲಾ ಹಿಡಿದು ಮಟ್ಟ ಹಾಕಬೇಕು ಎಂಬ ಒಳ್ಳೆಯ ಮಾತನ್ನು ಹೇಳಿದ್ದಾರೆ. ಅದನ್ನು ಮಾಡಬೇಕು, ಅವರಿಗೆ ಈ ವಿಷಯವಾಗಿ ನನ್ನದು ಸಂಪೂರ್ಣವಾದ ಬೆಂಬಲ ಇದ್ದೇ ಇದೆ. ನಿನ್ನೆ ಮೊನ್ನೆ ಬಂದಂಥ ಎಲ್ಲರನ್ನೂ ಸೇರಿದಂತೆ ಯಾರ್ಯಾರು ಅದರಲ್ಲಿ involve ಆಗಿದ್ದಾರೆ ನೋಡಿ, ದಯವಿಟ್ಟು ಅದನ್ನು ಮಾಡಿದರೆ ರಾಜಕೀಯ ಶುದ್ಧೀಕರಣ ಇವರಿಂದ ಪ್ರಾರಂಭವಾಗುತ್ತದೆ, ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಮನವಿ ಮಾಡುತ್ತೇನೆ, ಯಾರ್ಯಾರು ಬೇನಾಮಿ ಆಸ್ತಿಯನ್ನು ಮಾಡಿದ್ದಾರೆ? ಏನೇನು background ಇತ್ತು. ಈಗ ಎಷ್ಟೆಷ್ಟು ಲೆವೆಲ್‌ಗಿದ್ದಾರೆಂಬುದನ್ನು ಮಾಡಿಬಿಟ್ಟರೆ ನೀವು ಚರಿತ್ರೆಯಲ್ಲಿ ನಿಲ್ಲುತ್ತೀರಿ, ದಯಮಾಡಿ, I appeal to the Hon'ble chief Minister ಇದನ್ನು ಮಾಡಬೇಕು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಈಗ ನೀವು ಬೇನಾಮಿಯಲ್ಲಿರುವವರನ್ನು ಹಿಡಿಯುವುದು ಬಹಳ ಕಷ್ಟ. ಬಹಳ ಜನ ಬೇನಾಮಿಯಲ್ಲಿ ಕೋಟಿಗಟ್ಟಲೆ ಆಸ್ತಿ ಮಾಡಿಕೊಂಡು ಬಿಟ್ಟಿದ್ದಾರೆ, ಅವರಿಗೂ ಗೊತ್ತಿದೆ, ಆ ಸಮಿತಿಯವರಿಗೂ ಕೂಡ ಗೊತ್ತಾಗಿರಬೇಕೆಂದು ಅನ್ನಿಸುತ್ತದೆ. ಅದಕ್ಕೇನಾದರೂ ಒಂದು ಕಾಯ್ದೆ ತೆಗೆದುಕೊಂಡು ಬರಬೇಕು. ಬೇನಾಮಿ ಬಹಳ ಜನ ಮಾಡಿಕೊಂಡಿದ್ದಾರೆ. ಕಳೆದ 25–30 ವರ್ಷಗಳಲ್ಲಿ ರಾಜಕಾರಣಕ್ಕೆ ಬಂದವರು ಇದ್ದಕ್ಕಿದ್ದಂತೆ

ಬೇನಾಮಿ ಹೆಸರಿನಲ್ಲಿ ಆಸ್ತಿಗಳನ್ನು ಮಾಡಿಬಿಟ್ಟಿದ್ದಾರಲ್ಲಾ, ಅದನ್ನೇನಾದರೂ ಮಾಡಲಿಕ್ಕೆ ಸಾಧ್ಯವೇ? ಅವರನ್ನೆಲ್ಲಾ ಹಿಡಿದು ಸ್ವಲ್ಪ ಜೈಲಿಗೆ ಕಳುಹಿಸಲ್ಲಿಕ್ಕೆ ಸಾಧ್ಯವೇ? ಅದನ್ನೆಲ್ಲಾ ಪತ್ತೆ ಹಚ್ಚಿ ಮಾಡಿದರೆ ಅದಕ್ಕೆ ನಮ್ಮದೆಲ್ಲಾ Support ನಿಮಗಿರುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಸನ್ಮಾನ್ಯ ರಾಷ್ಟ್ರಪತಿಗಳ ಅಂಕಿತ ಆಗಿ ಬಂದ ತಕ್ಷಣ ಅಲ್ಲಿ Special court ಮಾಡುವುದಕ್ಕೂ ನಾವು Provision ಮಾಡಿಕೊಂಡಿದ್ದೇವೆ. ಹಾಗಾಗಿ ತಕ್ಷಣ ಅಂಕಿತ ಆಗಿ ಬಂದ ಮೇಲೆ Special court ಮಾಡಲಿಕ್ಕೆ ನಾನು ಪರಿಶೀಲನೆ ಮಾಡುತ್ತೇನೆ. ಏನೇನು ನಿಮ್ಮ ಹತ್ತಿರ ಮಾಹಿತಿಗಳಿವೆ ಎಲ್ಲವನ್ನೂ ಕೊಟ್ಟರೆ ಅವರನ್ನು ಬಗ್ಗುಬಡಿಯೋಣ, ಸರಿಪಡಿಸೋಣ.

ಅಧ್ಯಕ್ಷರು : ಈ ವಿಷಯವನ್ನು ಇಲ್ಲಿಗೆ ಮುಕ್ತಾಯಗೊಳಿಸೋಣ. ಮತ್ತೊಮ್ಮೆ ಇದರ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಎ. ಮಂಜು (ಅರಕಲಗೂಡು) : ಈ ಸಮಿತಿಯನ್ನೇನು ಮಾಡಿದ್ದಾರೆ, ಇದರಿಂದ ನಿಜವಾಗಿಯೂ ಒಂದು ಹೊಸ ಅಧ್ಯಯನ ಪ್ರಾರಂಭ ಮಾಡಬೇಕೆಂದು ಈ ಸಮಿತಿ ರಚನೆ ಮಾಡಿದ್ದಾರೆ, ಇದರಲ್ಲಿ ತಪ್ಪೇನಿಲ್ಲ, ಇದಕ್ಕೆ ನಾನು ಸ್ವಾಗತ ಮಾಡುತ್ತೇನೆ. ಹಿಂದೆ ಇದ್ದಂಥ ಅಧ್ಯಕ್ಷರು ಸದನ ಸಮಿತಿಯನ್ನು ಮಾಡಬೇಕೆಂದು ತೀರ್ಮಾನಿಸಿ ಅದರಂತೆ ನಿಮ್ಮ ನೇತೃತ್ವದಲ್ಲಿ ಈ ಸಮಿತಿಯನ್ನು ಏನು ಮಾಡಿದ್ದೀರಿ, ಆ ಸಮಿತಿಯ ರಿಪೋರ್ಟ್ ಇಲ್ಲಿ ಬರದೆ ಯಾರೂ ಕಳ್ಳರು ಏನು ಎಂದು ತೀರ್ಮಾನ ವಾಗದೇ.. ಈ ಸಮಿತಿಗೆ ಏನು ರಿಪೋರ್ಟ್ ಇಡುತ್ತೀರಿ ಸ್ವಾಮಿ? ಟಿ.ವಿ.ಯಲ್ಲಿ 44,000 ಎಕರೆಯನ್ನು 9 ಎಕರೆ ಎಂದು ಹೇಳುವುದಾದರೆ ಆ ಸಮಿತಿಯಲ್ಲಿನ ರಿಪೋರ್ಟ್ ಅನ್ನು ಇಲ್ಲಿಟ್ಟು ನೀವು ಮಾಡಬೇಕು. ಇದಕ್ಕೆ ಸಂಬಂಧಪಟ್ಟ ಹಾಗೆ ನಾನೊಂದು ಪ್ರಶ್ನೆಯನ್ನು ಕೇಳಿದ್ದೆನು. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಒಂದು ವಾರ ಸಮಯ ತೆಗೆದುಕೊಂಡಿರಿ. ಇವತ್ತು ಬುಧವಾರ ಉತ್ತರ ಕೊಡುತ್ತೇನೆಂದು ಹೇಳಿದ್ದಿರಿ, ನೀವು ಇನ್ನೂ ನನಗೆ ಉತ್ತರ ಕೊಡಲಿಲ್ಲ. ಈ ಸದನದಲ್ಲಿ ಮಾಡಿರುವಂಥ ಸಮಿತಿಗೆ ಗೌರವವನ್ನು ಕೊಡಬೇಕಾದರೆ ದಯವಿಟ್ಟು ಇದನ್ನು ಮಾಡುವುದಕ್ಕಿಂತ ಮುಂಚೆ ಆ ಸಮಿತಿಯ ವರದಿಯನ್ನು ಇಟ್ಟು ಯಾರ್ಯಾರು ಇದ್ದಾರೆ ಎಂದು ಲಿಸ್ಟ್ ಹಾಕಿ ಇಂತಿಂಥ ಸಮಿತಿಯಲ್ಲಿ ಇಂತಿಂಥವರು ಮಾಡಿದ್ದಾರೆ ಇದರ ಬಗ್ಗೆ ಕ್ರಮ

ತೆಗೆದುಕೊಳ್ಳಿ ಎಂದು ನೀವು ಮೊದಲು ಹೇಳಬೇಕು. ನೀವು ರಿಪೋರ್ಟ್ ಕೊಡದೆ ಇದ್ದರೆ ಆಗುವುದಿಲ್ಲ. ಆ ಮೇಲೆ ಎಲ್ಲರೂ ಮಾತನಾಡುತ್ತಾರೆ, ಇದನ್ನು ಎಲ್ಲರೂ ಒಟ್ಟಾಗಿ ನಿಲ್ಲಿಸಬೇಕು, ಪಕ್ಷಾತೀತವಾಗಿ ಮಾಡಬೇಕು, ಎಲ್ಲಿಂದ? ಇಲ್ಲಿಂದೀಚೆಗೆ, ಒಳಗಿನಿಂದ ಎಲ್ಲರೂ ಹೇಳಬೇಕು, ಯಾರೂ ಹೇಳುತ್ತಿಲ್ಲ, ಇಲ್ಲಿರುವವರೇ ನಾವೇ ಕಳ್ಳರು, ಹೇಳಲಿ, ನಾವು ರಕ್ಷಣೆ ಮಾಡುವುದಿಲ್ಲವೆಂದು ಮೊದಲು ಇಲ್ಲಿರುವವರು ಹೇಳಬೇಕು. ಬೇರೆಯವರು ಯಾರು ಹೇಳಲಿಕ್ಕೆ ಬರುವುದಿಲ್ಲ. ಒಂದು ಸಾಧನೆಯನ್ನೇನು ಮಾಡಿದ್ದೀರಿ ಎಂದರೆ, ಬೆಂಗಳೂರಿನ ಸುತ್ತಮುತ್ತ ಎನ್ನುವುದರ ಜೊತೆಗೆ ರಾಜ್ಯವನ್ನೆಲ್ಲಾ ಎಂದು ಸೇರಿಸಿ ಅದೊಂದು ಒಳ್ಳೆಯ ಕೆಲಸ ಮಾಡಿದ್ದೀರಿ, ದಯಮಾಡಿ ಇದಕ್ಕೇನಾದರೂ ಗೌರವ ಬರಬೇಕಾದರೆ ಆ ಸಮಿತಿಯ ರಿಪೋರ್ಟ್ ಅನ್ನು ಇಟ್ಟು ಆ ಮೇಲೆ ಇದನ್ನು ಅವರಿಗೆ ಒಪ್ಪಿಸುವಂಥ ವ್ಯವಸ್ಥೆಯನ್ನು ಮಾಡಬೇಕು. ಈಗಾಗಲೇ ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಬಿ.ಐ.ಎಫ್.ಆರ್.ಡಿ.ಯಲ್ಲಿ ಆಗಿರುವ ಅನ್ಯಾಯದ ಬಗ್ಗೆ ಒಂದು ಪ್ರಶ್ನೆಯನ್ನು ಕೊಟ್ಟಿದ್ದೇನು, ಅದು Star Question ಆಗಿತ್ತು. ಅದಕ್ಕೆ ನೀವು ಒಂದು ವಾರ ಸಮಯ ತೆಗೆದುಕೊಂಡಿರಿ, ನನಗೆ ಆ ವಿಷಯವನ್ನು ಮಂಡನೆ ಮಾಡಲಿಕ್ಕೆ ಅವಕಾಶ ಕೊಡಲಿಲ್ಲ, ನನಗೆ ಅವಕಾಶವನ್ನೇ ಕೊಡಿ. ದಯಮಾಡಿ ಇನ್ನು ಮೇಲಾದರೂ ಒಂದು ರಿಪೋರ್ಟ್ ತರಿಸಿಕೊಡಿ. ಆ ಮೇಲೆ ಇದರಲ್ಲಿ ಯಾವ್ಯಾವ ಅಧಿಕಾರಿಗಳು ಸೇರಿದ್ದಾರೆ, ಯಾವ್ಯಾವ ಮಂತ್ರಿಗಳ ಶಿಫಾರಸ್ಸು ಇದೆ? ಯಾವ್ಯಾವ ಮಂತ್ರಿಗಳು ಪತ್ರ ಬರೆದಿದ್ದಾರೆ? ಯಾವ್ಯಾವ ಮ್ಯಾಪ್ ಅನ್ನು ಅಪ್ರೂವಲ್ ಮಾಡಿದ್ದಾರೆ? ಯಾವ್ಯಾವ ಮುಖ್ಯಮಂತ್ರಿಗಳು ಬರೆದು ಕೊಟ್ಟಿದ್ದಾರೆ ಅನ್ನುವುದನ್ನು ನಾವು ಆಗ ಹೇಳುತ್ತೇವೆ. ದಯಮಾಡಿ ಆ ರಿಪೋರ್ಟ್ ಅನ್ನು ಕೊಡಿ.

ಶ್ರೀ ಸಿದ್ದರಾಮಯ್ಯ : ಅಧ್ಯಕ್ಷರೇ, ಈಗ ನನಗಿರುವ information ಅನ್ನು ನಾನು ಇಲ್ಲಿ ಹೇಳಿಬಿಡುತ್ತೇನೆ, ಏನೆಂದರೆ ರಾಮಸ್ವಾಮಿಯವರು ಇತ್ತೀಚೆಗೆ ನನ್ನನ್ನು ಬೇಟಿಯಾಗಿದ್ದರು, ನನಗೆ ಗೊತ್ತಿರುವ ಮಾಹಿತಿ ಪ್ರಕಾರ, ಅವರೊಂದಿಗೆ ಮಾತನಾಡಿದ ಪ್ರಕಾರ, ಹಿಂದೆ ಇದ್ದಂಥ ಸಭಾಧ್ಯಕ್ಷರಿಗೆ ಅವರು ಎರಡು Interim report ಹಾಗೂ ಒಂದು ಪತ್ರವನ್ನು ಬರೆದಿದ್ದಾರೆ ಹೊರತು ಅಂತಿಮ ವರದಿಯನ್ನು ಅವರು ಕೊಟ್ಟಿಲ್ಲ. ಆ ವೇಳೆಗೆ assembly dissolve ಆಗಿಹೋಯಿತು. ಹಾಗಾಗಿ Final report ಕೊಡಲಿಲ್ಲ. So this

is the truth, but ಅದನ್ನು Suppress ಮಾಡಿ ಏಕೆ ಈ ರೀತಿ statement ಕೊಟ್ಟಿರಿ ಎಂದು ನನಗೆ ಅರ್ಥವಾಗುತ್ತಿಲ್ಲ. Suppressing the truth, without Knowing the facts ಕೊಟ್ಟಿರುವಂಥದ್ದು ಸರಿಯಲ್ಲ, ರಿಪೋರ್ಟ್ ಕೊಡಿ ಎಂದರೆ ಅವರು ನಾಳೆ ಎಲ್ಲಿಂದ submit ಮಾಡುತ್ತಾರೆ? Wthere is the report with him?

ಶ್ರೀ ಜಿ.ಕರುಣಾಕರ ರೆಡ್ಡಿ (ಮಾನ್ಯ ಕಂದಾಯ ಸಚಿವರು) : ಮೊದಲು ರಾಮಸ್ವಾಮಿಯವರು ಎರಡು ಮಧ್ಯಂತರ ವರದಿಯನ್ನು ಕೊಟ್ಟಿದ್ದಾರೆ ಎಂದು ಹೇಳಿದಿರಿ, ಈಗ ರಾಮಸ್ವಾಮಿಯವರು ಅಂತಿಮ ವರದಿ ಕೊಟ್ಟಿಲ್ಲವೆಂದು...

ಶ್ರೀ ಸಿದ್ದರಾಮಯ್ಯ : ನಿಮ್ಮ ಸ್ಟೇಟ್‌ಮೆಂಟ್ ಅಲ್ಲವೇ ಇದು? Is not the Government Statement? It is your statement, it is not my statement. It is Chief Minister, who made the statement in writing. ದಿನಾಂಕ: 23.09.2007ರಲ್ಲಿ ಅಂತಿಮ ವರದಿ ಬಂದಿದೆ, ಇದನ್ನು ನಾನು ಹೇಳಿದೆನೆ? ರಾಮಸ್ವಾಮಿಯವರು ಹೇಳಿದರು ಎಂದು ಹೇಳಿದ್ದೇನೆ ಅಷ್ಟೇ. ಆಯಿತು, ನಾಳೆ ನೀವು ಅಂತಿಮ ವರದಿಯನ್ನು ಇಡದೆ ಹೋದರೆ ಏನು ಮಾಡುತ್ತೀರಿ? ನೀವೆಲ್ಲಾ ರಾಜೀನಾಮೆ ಕೊಟ್ಟು ಹೊರಟು ಹೋಗುತ್ತೀರಾ? ಆ ಸಭಾಧ್ಯಕ್ಷರ decide ನಲ್ಲಿ ಈ ರೀತಿ ಸ್ಟೇಟ್‌ಮೆಂಟ್ ಆಗಿರುವುದು, ಅವರು ಮಾಡಿಲ್ಲ, ನೀವು ಮಾಡಿರುವುದು, ನೀವು ಬಿಟ್ಟು ಹೋಗುತ್ತೀರಾ? Don't mislead the House.

ಅಧ್ಯಕ್ಷರು : ಈಗ ಇಲ್ಲಿಗೆ ಚರ್ಚೆ ಸಾಕು. ಪರಮೇಶ್ವರ್ ಸಾಕು.

ಡಾ: ಜಿ. ಪರಮೇಶ್ವರ್ (ಕೊರಟಗೆರೆ) : ಇದು ಬಹಳ serious matter. **(ಗೊಂದಲ)** ಸ್ವಾಮಿ ನಮಗೆ ಸ್ವಲ್ಪ ಮಾತನಾಡುವುದಕ್ಕೆ ಅವಕಾಶ ಕೊಡಿ. ಒಂದು ಕಡೆ 21-09-2007 ರಂದು ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ. ಆದರೆ, ವರದಿ ಸಲ್ಲಿಸಿಲ್ಲವೆಂದು Opposition Leader ಹೇಳುತ್ತಾರೆ. ನನಗೆ ಮಾನ್ಯ ಎ.ಟಿ.ರಾಮಸ್ವಾಮಿಯವರು ಹೇಳಿದರು, ವರದಿಯನ್ನು ಸಲ್ಲಿಸಿಲ್ಲವೆಂದು ಹೇಳುತ್ತಾರೆ. ಯಾವುದನ್ನು ನಾವು ನಂಬಬೇಕು? ಈ ರಾಜ್ಯದ ಜನತೆಗೆ ಯಾವ ಸಂದೇಶವನ್ನು ತಾವು ಕೊಡುತ್ತಿದ್ದೀರಿ? ಮಾನ್ಯ ಮುಖ್ಯಮಂತ್ರಿಗಳು ಇಂತಹ ಒಂದು statement ಅನ್ನು ಕೊಡಬಹುದೇ?

ಶ್ರೀ ಸಿದ್ದರಾಮಯ್ಯ : Final Report ಎಲ್ಲಿದೆ? ನಿಮ್ಮ ಹತ್ತಿರ ಇಲ್ಲ. ಆದ್ದರಿಂದ ಪಾಪ ನೀವು ಎಲ್ಲಿಂದ ತಂದು ಕೊಡುತ್ತೀರಿ?

ಡಾ: ಜಿ. ಪರಮೇಶ್ವರ್ : If the statement of the opposition Leader is true, ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕು. ಈ ಸದನವನ್ನು ತಪ್ಪು ದಾರಿಗೆ ಎಳೆಯತಕ್ಕಂಥದ್ದನ್ನು. ಈ ರಾಜ್ಯದ ಜನತೆಗೆ ನೀವು ಮೋಸ ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ (ಅರಸೀಕೆರೆ) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಎ.ಟಿ.ರಾಮಸ್ವಾಮಿಯವರು ಮೊನ್ನೆ ದಿನ ಉದಯ ಟಿ.ವಿ.ಯಲ್ಲಿ ಸಂದರ್ಶನ ಕೊಟ್ಟು ಬಹಳ ನೊಂದು ಮಾತನಾಡಿದರು. ನಾನು ವರದಿಯನ್ನು ತಯಾರು ಮಾಡಿದೆ. ಆ ವರದಿಯನ್ನು ಇನ್ನೂ ಅನುಷ್ಠಾನಕ್ಕೆ ತರಲಿಲ್ಲ, ಅದನ್ನು ಕಾರ್ಯಗತ ಮಾಡಲಿಲ್ಲ, ಆ ಸಮಿತಿಯವರು ಎಷ್ಟು ಕಷ್ಟಪಟ್ಟರೂ ಕೂಡ ಅದಕ್ಕೆ ನಿಜವಾದ ಮಾನ್ಯತೆ ಸಿಗಲಿಲ್ಲವೆಂದು ಬಹಳ ನೊಂದು ಮಾತನಾಡಿದರು. ಅವರು ಟಿ.ವಿ.ಯ ಸಂದರ್ಶನದಲ್ಲಿ ನೊಂದು ಮಾತನಾಡಿದ ಮೇಲೆ ಸ್ವಲ್ಪ ಈ ಕಡೆಗೆ ಚುರುಕು ಮುಟ್ಟಿರಬೇಕು. ಈಗ ಕೆಲಸ ಪ್ರಾರಂಭ ಮಾಡಿರುವ ಹಾಗೆ ಕಾಣುತ್ತಿದೆ. ಆದರೆ, ಸದನದ ಸಭಾ ನಾಯಕರಾಗಿ ತಪ್ಪು ಮಾಹಿತಿಯನ್ನು ಸರ್ಕಾರಕ್ಕೆ, ಸದನಕ್ಕೆ ಕೊಡಬಾರದು. ಈ ಮನೆಯಲ್ಲಿ ಅವರೆಲ್ಲಾ ಬಹಳ ರೂಲ್ಸ್ ಆಗಿ ಮಾತನಾಡುತ್ತಾರೆ. ಯಾವುದೇ ಸಾಂಪ್ರದಾಯಿಕವಾದಂಥ ಚೌಕಟ್ಟಿನೊಳಗೆ ನಾವು ಕೆಲಸ ಮಾಡುವುದಿಲ್ಲವೆಂದು ಹೇಳುತ್ತಾರೆ. ಆದರೆ, ಇವತ್ತು ಆ ಕಾನೂನಿನ ಚೌಕಟ್ಟನ್ನು ಮೀರಿ, ಆ ಕಡೆಯಿಂದ statement ಮಾಡುವಾಗ ಆತುರವಾಗಿ ಇವತ್ತು ಏನೋ ಆಗಿ ಹೋಯಿತು ಎನ್ನುವ ಹಾಗೆ ನಾನು ಒಂದು ಸಮಿತಿ ಮಾಡಿದ್ದೇನೆ. ನಾನು ಇದರಿಂದ ಈ ರಾಜ್ಯಕ್ಕೆ ಬೆಳಕು ಚೆಲ್ಲಿ ಎಲ್ಲೆಲ್ಲಿ ಅವ್ಯವಹಾರ ನಡೆದಿದೆ ಎಂದು ಕಂಡು ಹಿಡಿಯುತ್ತೇವೆ ಎಂದು ಹೇಳುತ್ತಾರೆ. ಅದಕ್ಕೆ ಸಂತೋಷ. ವಿಶೇಷ ನ್ಯಾಯಾಲಯ ರಚನೆ ಮಾಡಬೇಕು ಎನ್ನುವುದು ಸದಸ್ಯರ ಅಭಿಪ್ರಾಯ. ಅದು ಕೂಡ ಸಂತೋಷ. ಆದರೆ, ಯಾವುದೇ ಒಂದು ನಿರ್ಧಾರವನ್ನು ತೆಗೆದುಕೊಳ್ಳುವುದಕ್ಕಿಂತ ಮುಂಚಿತವಾಗಿ ಆ ವಿಚಾರದ ಬಗ್ಗೆ ಸಭಾ ನಾಯಕರು ಆತುರ ಪಡದ ರೀತಿಯಲ್ಲಿ ಬಹಳ ಸವಿಸ್ತಾರವಾಗಿ ತಿಳಿದುಕೊಂಡು ಸಭೆ ನಡೆಸಬೇಕು. ಇಲ್ಲಿ ಈ ಕಡೆಯಿಂದ ವರದಿಯನ್ನು

ಮಂಡಿಸಿಲ್ಲವೆಂದು ಹೇಳುತ್ತಿದ್ದಾರೆ. ನೀವು ಸ್ಪೀಕರ್ ಮುಂದೆ ತಂದು ಮಂಡಿಸಿ ಎಂದು ಹೇಳುತ್ತಾರೆ. ನಾಳೆ ಬೆಳಿಗ್ಗೆ ಸಭಾಧ್ಯಕ್ಷರನ್ನು ನಾವು ಈ ಸದನದಲ್ಲಿ ಹೇಗೆ ಕೇಳುವುದು?

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ನಾನು ಹೇಳುವುದನ್ನು ಕೇಳಬೇಕು. ಮಾನ್ಯ ಜಯಚಂದ್ರರವರೇ, ನಾನು ಹೇಳುವುದನ್ನು ಕೇಳಿ. ಎ.ಟಿ.ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಏನು ಒಂದು ಜಂಟಿ ಸದನ ಸಮಿತಿ ನೇಮಕ ಆಯಿತು, ಅದು 12ನೇ ವಿಧಾನಸಭೆಯಲ್ಲಿ ಆವತ್ತಿನ ಸ್ಪೀಕರ್ ನೇಮಕ ಮಾಡಿದರು. ಆ ಒಂದು 12ನೇ ವಿಧಾನಸಭೆ ಮುಂದುವರೆಯುವಂಥ ಸಂದರ್ಭದಲ್ಲಿ ಮಧ್ಯದಲ್ಲಿ ಸರ್ಕಾರ dissolve ಆಯಿತು. ರಾಷ್ಟ್ರಪತಿ ಆಡಳಿತ ಬಂತು. ನಂತರ ರಾಜ್ಯಪಾಲರು administration ನಡೆಸಿದರು. ಆ ಸಂದರ್ಭದಲ್ಲಿ ಆವತ್ತಿನ ಸ್ಪೀಕರ್‌ರವರಿಗೆ ಎ.ಟಿ.ರಾಮಸ್ವಾಮಿಯವರು ಏನು ಕೆಲವು ಮಧ್ಯಂತರ ವರದಿಯನ್ನು submit ಮಾಡಿದ್ದರು, ಎರಡು ಮಧ್ಯಂತರ ವರದಿಗಳನ್ನು submit ಮಾಡಿದ್ದರು ಮತ್ತು ಕೆಲವೊಂದು ಪೇಪರ್ಸ್ ಅನ್ನು ಕೂಡಾ submit ಮಾಡಿದ್ದರು, ಆವತ್ತಿನ ಸ್ಪೀಕರ್ ಆದಂಥ ಕೃಷ್ಣರವರಿಗೆ submit ಮಾಡಿದ್ದರು. ಆ ಮೇಲೆ ಅದು dissolve ಆಗಿದ್ದರಿಂದ, ಪೇಪರ್ಸ್ ಏನು ಹಿಂದಿನ ಸ್ಪೀಕರ್‌ರವರಿಗೆ ಕೊಟ್ಟಿರುತ್ತಾರೆ ಅವು ಎಲ್ಲೂ ಕೂಡ ಹೋಗುವುದಿಲ್ಲ. ನಮ್ಮ ಕಸ್ಟಡಿಯಲ್ಲಿ ಇದ್ದೇ ಇರುತ್ತದೆ. ಇವತ್ತಿನ ಸ್ಪೀಕರ್ ಕಸ್ಟಡಿಯಲ್ಲಿ ಇದ್ದೇ ಇರುತ್ತವೆ. ಹೀಗಾಗಿ ನಾನು ಹೇಳುವುದು ಏನೆಂದರೆ, ಅದನ್ನು verify ಮಾಡಿ ಯಾರು ವರದಿ ಕೊಟ್ಟಿದ್ದಾರೆ, ಅದನ್ನು ನೋಡಿಕೊಂಡು submit ಮಾಡುವುದನ್ನು ಸರ್ಕಾರಕ್ಕೆ ಕಳುಹಿಸುವುದನ್ನು ನಾವು ಮಾಡುತ್ತೇವೆ. ಮತ್ತೊಂದು ಇನ್ನೊಂದು ತಾಂತ್ರಿಕವಾದಂಥದ್ದು, ನಿಮಗೆ ಅದನ್ನು ಚರ್ಚೆಗೆ ಬಿಡುತ್ತೇವೆ. 12ನೇ ವಿಧಾನಸಭೆಯಲ್ಲಿ ಏನು ಒಂದು ಜಂಟಿ ಸದನ ಸಮಿತಿ ನೇಮಕ ಆಯಿತು, ಆ ನೇಮಕವಾದಂಥದ್ದಕ್ಕೆ ಅಂತಿಮ ವರದಿ ಕೊಟ್ಟಿದ್ದಾರೋ ಅಥವಾ interim ವರದಿ ಕೊಟ್ಟಿದ್ದಾರೋ, ಅದನ್ನು ಇವತ್ತಿನ ಈ ಒಂದು 13ನೇ ವಿಧಾನಸಭೆ ಸದನದಲ್ಲಿ ಇದರಲ್ಲಿ ಮಂಡನೆ ಮಾಡುವುದಕ್ಕೆ ಸಾಧ್ಯವೇ ಅಥವಾ ಇಲ್ಲವೇ ಎಂಬುದನ್ನು ನಾವು verify ಮಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಆರ್.ರೋಷನ್ ಬೇಗ್ : Why not?

(ಗೊಂದಲ)

ಅಧ್ಯಕ್ಷರು : ಆವತ್ತು ಅದು dissolve ಆಯಿತು. ಆ ಕಮಿಟಿಯೂ ಹೋಯಿತು.

(ಗೊಂದಲ)

ಶ್ರೀಸಿದ್ದರಾಮಯ್ಯ : ಆಗಬಹುದು.

ಅಧ್ಯಕ್ಷರು : ಅದನ್ನು ಸ್ವಲ್ಪ ಬೆಳಕು ಚೆಲ್ಲಬೇಕಾಗುತ್ತದೆ. ಇವತ್ತು ಎ.ಟಿ.ರಾಮಸ್ವಾಮಿಯವರು ಈ ಒಂದು ಮನೆಯ ಸದಸ್ಯರು ಅಲ್ಲ. ಆವತ್ತು 12ನೇ ವಿಧಾನ ಸಭೆಯ ಸದಸ್ಯರು ಇದ್ದರು. ಅವರ ಅಧ್ಯಕ್ಷತೆಯಲ್ಲಿ ಆ ಒಂದು ಸದನ ಸಮಿತಿ ಕೆಲಸ ಮಾಡಿತು. ತನ್ನ ಒಂದು ವರದಿ ಕೊಟ್ಟಿದ್ದಾರೆ. interim ವರದಿ, ಅಂತಿಮವಾದಂಥಾದ್ದನ್ನು verify ಮಾಡೋಣ. ಆದರೆ, ಅವರು ಇವತ್ತು ಇಲ್ಲಿ ಇಲ್ಲ. ಅವರು ಈ ಮನೆಯ ಸದಸ್ಯರು ಅಲ್ಲ. ಹೀಗಾಗಿ ಆ ಜಂಟಿ ಸದನ ಸಮಿತಿ ಇವತ್ತು ಅಸ್ತಿತ್ವದಲ್ಲಿ ಇಲ್ಲ. ಅದನ್ನು Continue ಮಾಡಬೇಕಾಗುತ್ತದೋ ಅಥವಾ ಮತ್ತೊಬ್ಬರ ಅಧ್ಯಕ್ಷತೆಯಲ್ಲಿ ಮಾಡಬೇಕಾ ಗುತ್ತದೋ ಅದನ್ನೆಲ್ಲಾ ನಾವು verify ಮಾಡಬೇಕಾಗುತ್ತದೆ. ಅವರು ಏನು ಆ ಸದನ ಸಮಿತಿಯಲ್ಲಿ ವರದಿ ಕೊಟ್ಟಿದ್ದಾರೆ, ಅದು 12ನೇ ವಿಧಾನಸಭೆಯ ಸದನದ ಸ್ವತ್ತು. ಹೀಗಾಗಿ ಅದನ್ನು ಇಲ್ಲಿ ಮಂಡನೆ ಮಾಡುವುದಕ್ಕೆ ಬರುತ್ತದೋ ಅಥವಾ ಇಲ್ಲವೋ ಎಂಬುದನ್ನು ನಾವು verify ಮಾಡಬೇಕಾ ಗುತ್ತದೆ. ಅದನ್ನು ತಿಳಿದುಕೊಂಡು ಇದರ ಬಗ್ಗೆ ನಿರ್ಣಯವನ್ನು ನಾನು ಕೊಡುತ್ತೇನೆ.

(ಗೊಂದಲ)

ಶ್ರೀ ಆರ್.ರೋಷನ್ ಬೇಗ್ : That is the property of this House.

(ಗೊಂದಲ)

ಶ್ರೀ ಸಿದ್ದರಾಮಯ್ಯ : The law is very clear. ಏನು ಹೇಳುತ್ತಾರೆ ಎಂದರೆ, when a report is completed by a committee, again I am repeating and bringing to your kind notice. When the House is not in session is presented by his Chairman to the Speaker.

ಅದನ್ನು ಹೇಳುತ್ತಾ, and before it is presented to the House in the next session Lok Sabha is dissolved. Here also Assembly is dissolved. The report is laid by the Secretary General on the table of the new House at the first convenient opportunity. ಉತ್ತರ ಬಹಳ ಸ್ಪಷ್ಟವಾಗಿದೆ. ನಾನು ಏಕೆ ಈ ಮಾತನ್ನು ಹೇಳಿದೆ ಎಂದರೆ ಇವರು statement ಮಾಡಿದರು. 29-09-2007 ರಲ್ಲಿ ಅಂತಿಮ ವರದಿ ಬಂದಿದೆ ಎಂದು ಹೇಳಿದರು. ನನಗೆ ಇರುವ information ಪ್ರಕಾರ the committee could not able to submit the final report without knowing the facts. ಇವರಿಗೆ ಅಧಿಕಾರಿಗಳು, Chief Secretary, ಇವರೆಲ್ಲಾ ಎಷ್ಟೊಂದು ಜನ ಇದ್ದಾರೆ, ಏಕೆ ಇವರಿಗೆ wrong information ಕೊಟ್ಟು ಇವರ ಹತ್ತಿರ wrong statement ಮಾಡಿಸುತ್ತಾರೆ? ನಿಮ್ಮ ಹತ್ತಿರ ರಿಪೋರ್ಟ್ ಇಲ್ಲ. ನನಗೆ ಗೊತ್ತಿರುವ ಮಟ್ಟಿಗೆ final report ಇಲ್ಲದೇ ಇರುವುದರಿಂದ, ನನಗೆ ಗೊತ್ತಿರುವ ಮಟ್ಟಿಗೆ information ಪ್ರಕಾರ ಅವರು ಒಂದು ಪತ್ರ ಬರೆದಿದ್ದಾರೆ. ಕೆಲವು ಲೆಟರ್ಸ್ ಮೇಲೆ ಪತ್ರ ಕಳುಹಿಸಿರಬಹುದು. But no final report is submitted. This is the fact. ಈ facts ಅನ್ನು ಬಿಟ್ಟು ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಈ ತರಹ statement ಮಾಡುವುದು ಸರಿಯಲ್ಲ. ಅವರು ಏನು ಹೇಳುತ್ತಾರೆ ಎಂದರೆ ನಿಮಗೆ president ರವರು ಕೊಟ್ಟಿಲ್ಲ, ಸ್ಪೀಕರ್ ಕಳುಹಿಸಿಲ್ಲ, ನಾವು unofficial ಆಗಿ ರಿಪೋರ್ಟ್ ತೆಗೆದುಕೊಂಡಿದ್ದೇವೆ ಎಂದು ಹೇಳುತ್ತೀರಿ. ನಾವು ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಶುರು ಮಾಡಿದ್ದೇವೆ ಎಂದು ಹೇಳುತ್ತಿದ್ದೀರಿ. ಇದು ಅಸತ್ಯ ಅಲ್ಲವೇ? Is it not a misleading statement to the House? Is it not a wrong statement? Is it not a violation of the rules and regulation of this House. That is our point.

(ಗೊಂದಲ)

ಶ್ರೀ ನೆ.ಲ.ನರೇಂದ್ರಬಾಬು : ಮಾನ್ಯ ಅಧ್ಯಕ್ಷರೆ,...

(ಗೊಂದಲ)

ಅಧ್ಯಕ್ಷರು : ಮಾನ್ಯ ನರೇಂದ್ರ ಬಾಬುರವರೇ, ಈಗ ಇದನ್ನು close ಮಾಡೋಣ. ಅದನ್ನು separate ಆಗಿ ಮಾತನಾಡಿ. ಇಷ್ಟೇಲ್ಲಾ discussion ಆಗಿದೆ. ಈಗ ಅದನ್ನು ಮುಗಿಸೋಣ. ಈ subject ಅನ್ನು close